Swabhimani Sahakari

# ಸ್ವಾಭಿಮಾನಿ ಸಹಕಾರಿ

Pages : 26 / 20₹

Volume - 21
Issue - 02
February- 2024

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

## ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಂದ 2024-25ನೇ ಸಾಲಿನ ರೂ.47.66 ಲಕ್ಷ ಕೋಟಿ ಗಾತ್ರದ ಮಧ್ಯಂತರ ಬಜೆಟ್ ಮಂಡನೆ

ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿಯತ್ತ
ಜೈಜವಾನ್, ಜೈಕಿಸಾನ್, ಜೈವಿಜ್ಞಾನ, ಜೈ ಅನುಸಂಧಾನ್
ಎಂಬ ಪ್ರಧಾನಿ ಮೋದಿ ಅವರ ಘೋಷಣೆಯಡಿ ಕಾರ್ಯನಿರ್ವಹಣೆ

**ಸಹಕಾರ ಸಚಿವಾಲಯಕ್ಕೆ ಅನುದಾನ:**
ರೂ.747ಯಿಂದ ರೂ.1,183 ಕೋಟಿಗೆ ಹೆಚ್ಚಿಸಲಾಗಿದೆ

## ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಫೆಬ್ರವರಿ 16ರಂದು 15ನೇ ಬಾರಿಗೆ ಬಜೆಟ್ ಮಂಡನೆ ಮಾಡುವ ಮೂಲಕ ರಾಜ್ಯದಲ್ಲಿ ಅತಿ ಹೆಚ್ಚು ಬಜೆಟ್ ಮಂಡಿಸಿದ ದಾಖಲೆ ಮಾಡಲಿದ್ದಾರೆ







ಸೌಹಾರ್ದ ಸಹಕಾರಿಗಳ
ಸಂಖ್ಯೆ : 6127

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1614



ಜಿ. ನಂಜನಗೌಡ

ಸರ್ಕಾರವು ಪಂಚ ವಾರ್ಷಿಕ ಯೋಜನೆಗಳ ಮೂಲಕ ಸಹಕಾರ ಕ್ಷೇತ್ರದ ಬಲವರ್ಧನೆಗೆ ಅನೇಕ ಯೋಜನೆಗಳನ್ನು ಜಾರಿಗೆ ತಂದರೂ ಸಹ ಸಹಕಾರ ಕ್ಷೇತ್ರದಲ್ಲಿ ನಿರೀಕ್ಷಿತ ಮಟ್ಟದ ಸಾಧನೆಯಾಗದಿರುವುದನ್ನು ಗಮನಿಸಿದ ಕೇಂದ್ರ ಸರಕಾರವು ಈ ದೇಶದ ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಬದಲಾವಣೆಯನ್ನು ಅಪೇಕ್ಷಿಸಿ, 1991ರಲ್ಲಿ ಮುಕ್ತ ಆರ್ಥಿಕ ವ್ಯವಸ್ಥೆಯನ್ನು ಜಾರಿಗೆ ತಂದಿರುವುದು ಈಗ ಇತಿಹಾಸ. ಈ ಪ್ರಯತ್ನದಿಂದಲೂ ಸಹ ಸಹಕಾರ ಕ್ಷೇತ್ರ ನಿರೀಕ್ಷಿಸಿದ ಪ್ರಗತಿಯನ್ನು ಸಾಧಿಸಲಾಗಲಿಲ್ಲ. ಇದಕ್ಕೆ ಪ್ರಮುಖ ಕಾರಣಗಳೆಂದರೆ ಸಹಕಾರಿ ಸಂಸ್ಥೆಗಳಲ್ಲಿ ಸೇವಾ ಮನೋಭಾವ, ಪಾರದರ್ಶಕ ಹಾಗೂ ವೃತ್ತಿಪರ ಆಡಳಿತದ ಕೊರತೆಗಳು ಎದ್ದು ಕಾಣುತ್ತಿತ್ತು. ಹಾಗೆಯೇ, ಕೃಷಿ ಇಲಾಖೆಯೊಂದಿಗೆ ಸಹಕಾರ ಇಲಾಖೆಯು ಕಾರ್ಯನಿರ್ವಹಿಸುತ್ತಿದ್ದು, ಇದರಿಂದಾಗಿ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಪರಿಣಾಮಕಾರಿಯಾಗಿ ಗಮನ ಕೇಂದ್ರೀಕರಿಸಲು ಸಾಧ್ಯವಾಗುತ್ತಿರಲಿಲ್ಲ.

# ಸೇವಾ ಮನೋಭಾವ, ವೃತ್ತಿಪರ ಮತ್ತು ಪಾರದರ್ಶಕ ಆಡಳಿತದಿಂದ ಸಹಕಾರ ಕ್ಷೇತ್ರದ ಅಭಿವೃದ್ಧಿ ಹಾಗೂ ವಿಶ್ವಾಸಾರ್ಹತೆ ಹೆಚ್ಚಿಸಲು ಸಾಧ್ಯ.

**ಆತ್ಮೀಯ ಸಹಕಾರಿ ಬಂಧುಗಳಿಗೆ, ಹೃದಯಪೂರ್ವಕ ನಮಸ್ಕಾರಗಳು.**

ಸರ್ಕಾರವು ಪಂಚ ವಾರ್ಷಿಕ ಯೋಜನೆಗಳ ಮೂಲಕ ಸಹಕಾರ ಕ್ಷೇತ್ರದ ಬಲವರ್ಧನೆಗೆ ಅನೇಕ ಯೋಜನೆಗಳನ್ನು ಜಾರಿಗೆ ತಂದರೂ ಸಹ ಸಹಕಾರ ಕ್ಷೇತ್ರದಲ್ಲಿ ನಿರೀಕ್ಷಿತ ಮಟ್ಟದ ಸಾಧನೆಯಾಗದಿರುವುದನ್ನು ಗಮನಿಸಿದ ಕೇಂದ್ರ ಸರಕಾರವು ಈ ದೇಶದ ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಬದಲಾವಣೆಯನ್ನು ಅಪೇಕ್ಷಿಸಿ, 1991ರಲ್ಲಿ ಮುಕ್ತ ಆರ್ಥಿಕ ವ್ಯವಸ್ಥೆಯನ್ನು ಜಾರಿಗೆ ತಂದಿರುವುದು ಈಗ ಇತಿಹಾಸ. ಈ ಪ್ರಯತ್ನದಿಂದಲೂ ಸಹ ಸಹಕಾರ ಕ್ಷೇತ್ರ ನಿರೀಕ್ಷಿಸಿದ ಪ್ರಗತಿಯನ್ನು ಸಾಧಿಸಲಾಗಲಿಲ್ಲ. ಇದಕ್ಕೆ ಪ್ರಮುಖ ಕಾರಣಗಳೆಂದರೆ ಸಹಕಾರಿ ಸಂಸ್ಥೆಗಳಲ್ಲಿ ಸೇವಾ ಮನೋಭಾವ, ಪಾರದರ್ಶಕ ಹಾಗೂ ವೃತ್ತಿಪರ ಆಡಳಿತದ ಕೊರತೆಗಳು ಎದ್ದು ಕಾಣುತ್ತಿತ್ತು. ಹಾಗೆಯೇ, ಕೃಷಿ ಇಲಾಖೆಯೊಂದಿಗೆ ಸಹಕಾರ ಇಲಾಖೆಯು ಕಾರ್ಯನಿರ್ವಹಿಸುತ್ತಿದ್ದು, ಇದರಿಂದಾಗಿ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಪರಿಣಾಮಕಾರಿಯಾಗಿ ಗಮನ ಕೇಂದ್ರೀಕರಿಸಲು ಸಾಧ್ಯವಾಗುತ್ತಿರಲಿಲ್ಲ.

ಈ ಹಿನ್ನೆಲೆಯಲ್ಲಿ 120 ವರ್ಷಗಳ ಇತಿಹಾಸವಿರುವ ಹಾಗೂ ಗಣನೀಯ ಸಾಧನೆ ಮಾಡಿರುವ ಸಹಕಾರ ಕ್ಷೇತ್ರವನ್ನು ದೇಶದ ಮುಖ್ಯವಾಹಿನಿಯಲ್ಲಿ ಗುರುತಿಸುವಂತಾಗಲು ಕೇಂದ್ರ ಸರ್ಕಾರವು ಪ್ರತ್ಯೇಕ ಸಹಕಾರ ಸಚಿವಾಲಯ ಸ್ಥಾಪನೆಯ ಮೂಲಕ "ಸಹಕಾರ್ ಸೇ ಸಮೃದ್ಧಿ" ಎಂಬ ಘೋಷ ವಾಕ್ಯದೊಂದಿಗೆ ಪ್ರತ್ಯೇಕ ಮೊತ್ತವನ್ನು ಮೀಸಲಿಟ್ಟು, ಹಲವಾರು ಪ್ರಗತಿಪರ ಯೋಜನೆಗಳನ್ನು ಜಾರಿ ಮಾಡುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

ಸಹಕಾರ ಕ್ಷೇತ್ರದಿಂದ ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಏನೆಲ್ಲಾ ಸಾಧಿಸಬಹುದು ಎಂಬುದನ್ನು ಹಾಲಿ ಕಾರ್ಯನಿರ್ವಹಿಸುತ್ತಿರುವ ದೇಶದ 8.5 ಲಕ್ಷ ವಿವಿಧ ರೀತಿಯ ಸಹಕಾರ ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡುವುದರಿಂದ ತಿಳಿಯಬಹುದಾಗಿದೆ. ನಮ್ಮ ದೇಶದ ಸಹಕಾರ ಚಳುವಳಿಯ ಗಾತ್ರ ದೊಡ್ಡದು. ಅಮೂಲ್, ಇಫ್ಕೋ, ಕ್ಯಾಂಪ್ಕೋ, ಮ್ಯಾಮ್ಕೋಗಳಂತಹ ಸಹಕಾರಿ ಸಂಸ್ಥೆಗಳು, ಉತ್ಕೃಷ್ಟವಾಗಿ ಬೆಳೆಯುತ್ತಿರುವ ಪಟ್ಟಣ ಸಹಕಾರ ಬ್ಯಾಂಕುಗಳು, ಕ್ರೆಡಿಟ್ ಸಹಕಾರ ಸಂಘಗಳು, ಕೃಷಿ ಪತ್ತಿನ ಸಹಕಾರ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳ ಕಾರ್ಯನಿರ್ವಹಣೆಗಳು ರಾಷ್ಟ್ರದ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರದ ಕೊಡುಗೆ ಅಪಾರ ಎಂಬುದನ್ನು ಸಾರಿ ಹೇಳುತ್ತಿವೆ.

ಆತ್ಮೀಯರೇ, ನಾವು ಪ್ರಮುಖವಾಗಿ ಗಮನಿಸಬೇಕಾದ ವಿಷಯವೆಂದರೆ ಸೇವಾ ಮನೋಭಾವ, ವೃತ್ತಿಪರ ಮತ್ತು ಪಾರದರ್ಶಕ ಆಡಳಿತದಿಂದ ಸಹಕಾರ ಕ್ಷೇತ್ರದ ಅಭಿವೃದ್ಧಿ ಹಾಗೂ ವಿಶ್ವಾಸಾರ್ಹತೆ ಹೆಚ್ಚಿಸುವಲ್ಲಿ ಸಹಕಾರಿ ಸಂಸ್ಥೆಗಳ ಆಡಳಿತ ಮಂಡಲಿಯವರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಸಹಕಾರಿ ಸಂಸ್ಥೆಗಳ ಮೂಲಕ ಸದಸ್ಯರಿಗೆ ಎಲ್ಲಾ ವಿಧವಾದ ಸೇವೆಗಳನ್ನು ಒದಗಿಸುವಾಗ ಆಡಳಿತದಲ್ಲಿ ಪಾರದರ್ಶಕತೆಗೆ ಹೆಚ್ಚು ಆದ್ಯತೆ ನೀಡುವುದನ್ನು ರೂಢಿಸಿಕೊಳ್ಳಬೇಕು. ಜೊತೆಗೆ ಸಹಕಾರಿ ಸಂಸ್ಥೆಗಳಿಂದ ಒದಗಿಸುವ ಎಲ್ಲಾ ಸೇವೆಗಳಲ್ಲಿ ವೃತ್ತಿಪರತೆಯನ್ನು ಕಡ್ಡಾಯವಾಗಿ ಪಾಲಿಸಬೇಕು. ಈ ಹಿನ್ನೆಲೆಯಲ್ಲಿ ಸಹಕಾರ ಸಂಸ್ಥೆಗಳು ತಮ್ಮ ಆಡಳಿತ ಮಂಡಲಿ ಹಾಗೂ ಸಿಬ್ಬಂದಿ ವರ್ಗಕ್ಕೆ ಅಗತ್ಯವೆನಿಸಬಹುದಾದ ತರಬೇತಿಗಳನ್ನು ಏರ್ಪಡಿಸುವ ಮೂಲಕ ಅವರನ್ನು ವೃತ್ತಿಪರರನ್ನಾಗಿಸಲು ಕೈ ಜೋಡಿಸಬೇಕು. ಆಗ ಮಾತ್ರ ಸಹಕಾರಿ ಸಂಸ್ಥೆಗಳು ಖಾಸಗಿ ವಲಯದವರೊಂದಿಗೆ ಸ್ಪರ್ಧಾತ್ಮಕವಾಗಿ ಕಾರ್ಯನಿರ್ವಹಿಸಲು ಮತ್ತು ಸಾರ್ವಜನಿಕವಾಗಿ ವಿಶ್ವಾಸಾರ್ಹತೆಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಸ್ಪರ್ಧಾತ್ಮಕ ಅರ್ಥ ವ್ಯವಸ್ಥೆಯಲ್ಲಿ ಪಾರದರ್ಶಕ ಹಾಗೂ ವೃತ್ತಿಪರ ಆಡಳಿತಕ್ಕೆ ಹೆಚ್ಚು ಮಹತ್ವವಿರುವುದರಿಂದ ಸಹಕಾರಿ ಸಂಸ್ಥೆಗಳು ಇವುಗಳನ್ನು ಅಳವಡಿಸಿಕೊಂಡು ಸಮರ್ಥವಾಗಿ ಸೇವೆ ನೀಡುವುದರ ಜೊತೆಗೆ ಲಾಭ ಗಳಿಸುವ ಗುರಿಯನ್ನು ಹೊಂದುವುದು ಅವಶ್ಯಕವಾಗಿದ್ದು, ಆ ನಿಟ್ಟಿನಲ್ಲಿ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸಬೇಕು.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................... 2
ಸಂಪಾದಕೀಯ............................................. 3
ಜ್ಞಾನ ಜ್ಯೋತಿ........................................... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................................ 05–16
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................................ 17–20
ಲೇಖನಗಳು :
ಸಹಕಾರ ಸಂಸ್ಥೆಗಳ ಪದಾಧಿಕಾರಿಗಳ ಆಡಳಿತ ಮಂಡಳಿ ಸದಸ್ಯರು, ಸಹಕಾರಿ ಸದಸ್ಯರ ಸೇವಕರೇ ? – ಒಂದು ವಿಮರ್ಷೆ...... 21–22
ಸಹಕಾರ ಸಂಸ್ಥೆಗಳನ್ನು ಡಿಜಿಟಲೀಕರಣಗೊಳಿಸಲು ತಾಂತ್ರಿಕತೆಯ ಅಳವಡಿಕೆ ಮತ್ತು ಉನ್ನತೀಕರಣ ........................................................ 23–24
ಸಂಯುಕ್ತ ಸಹಕಾರಿಯ ಸಾಧನೆಯ ಪರ್ವಕಾಲ ........................................................ 25–26

# ಸಂಪಾದಕೀಯ

## ಸಂಪನ್ಮೂಲಗಳ ಸದ್ಬಳಕೆಗೆ, ಕಾರ್ಯಯೋಜನೆ ಹಾಗೂ ಅನುಷ್ಠಾನ

ಭಾರತ ಶ್ರೀಮಂತ ರಾಷ್ಟ್ರ. ಆದರೆ ಈ ದೇಶದ ಜನ ಬಡವರು ಎಂದು ಹೇಳುತ್ತಿದ್ದ ಕಾಲ ಒಂದಿತ್ತು. ಯಾಕೆಂದರೆ ಈ ದೇಶದ ಜನರಿಗೆ ಸಂಪನ್ಮೂಲಗಳನ್ನ ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದು ತಿಳಿದಿರಲಿಲ್ಲ, ಅದ್ಧರಿಂದ ಬಡವರು ಎಂದು ಹೇಳುತ್ತಿದ್ದರು. ಆದರೆ ಇಂದಿನ ಸ್ಥಿತಿ ಹಾಗಿಲ್ಲ. ಪ್ರಚಲಿತ ವಿದ್ಯಮಾನಗಳಲ್ಲಿ ನೀರು, ಗಾಳಿ, ಬೆಳಕು, ಭೂಮಿ, ಆಕಾಶ (ಪಂಚಭೂತಗಳು) ಇವುಗಳ ಜೊತೆಗೆ ಸ್ವಾಭಾವಿಕ ಸಂಪನ್ಮೂಲಗಳು ಮತ್ತು ಮಾನವ ಸಂಪನ್ಮೂಲಗಳನ್ನು ಬಳಸಿ ಪ್ರಗತಿ ಸಾಧಿಸುತ್ತಲಿದ್ದೇವೆ. ಜಾಗತಿಕ ಮಟ್ಟದಲ್ಲಿ ನಮ್ಮ ಸಾಧನೆಗಳನ್ನ ಗುರುತಿಸಲಾಗಿದೆ. ಆದರೆ ಇದು ಸಾಲದು. ಭಾರತ ಮುಂದುವರೆದ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ಗುರುತಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ಸಹಕಾರ ಕ್ಷೇತ್ರದ ಕೊಡುಗೆಯೂ ಅವಶ್ಯಕವಾಗಿದೆ.

ವಿಶೇಷವಾಗಿ ಸಹಕಾರ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿನ ಎಲ್ಲ ವಿಧವಾದ ಸಂಪನ್ಮೂಲಗಳನ್ನು ಬಳಸಿಕೊಂಡು ಬೆಳೆಯಲು ವಿಫಲವಾಗಿವೆ. ಸಂಪನ್ಮೂಲ ಸಂಗ್ರಹಣೆಯಲ್ಲಿ ಆರ್ಥಿಕ ಸಂಪನ್ಮೂಲಗಳು ಹಾಗೂ ಮಾನವ ಸಂಪನ್ಮೂಲಗಳು ಆದ್ಯತೆಯನ್ನು ಪಡೆಯುತ್ತವೆ. ಆರ್ಥಿಕ ಸಂಪನ್ಮೂಲ ಸಂಗ್ರಹಣೆಯಲ್ಲಿ ಸಹಕಾರಿ ಸಂಸ್ಥೆಯ ವ್ಯಾಪ್ತಿಯಲ್ಲಿನ ಅರ್ಹ ಜನರನ್ನು ಸದಸ್ಯರನ್ನಾಗಿ ಮಾಡಿಕೊಳ್ಳುವುದರಿಂದ ಸಂಸ್ಥೆಯ ಪಾಲು ಬಂಡವಾಳ ಹೆಚ್ಚಾಗುತ್ತದೆ. ಸದಸ್ಯರಲ್ಲಿ ಉಳಿತಾಯ ಮನೋಭಾವವನ್ನು ಹೆಚ್ಚಿಸಿ ಅವರಿಂದ ಸಣ್ಣ ಉಳಿತಾಯಗಳನ್ನು ಠೇವಣಿ ರೂಪದಲ್ಲಿ ಸಂಗ್ರಹಿಸಿದಾಗ ಸಂಸ್ಥೆಯ ಬಂಡವಾಳ ಹೆಚ್ಚುತ್ತದೆ. ಇದರ ಜೊತೆಗೆ ಸದಸ್ಯರಿಂದ ಮಾತ್ರ ಠೇವಣಿಗಳನ್ನು ಸಂಗ್ರಹಿಸಲು ಅವಕಾಶವಿದೆ. ಹೀಗೆ ಬಂಡವಾಳವನ್ನು ಸಾಲ ಮತ್ತು ಲಾಭದಾಯಕ ಹೂಡಿಕೆಗಳಲ್ಲಿ ಬಳಸಿ ಹೆಚ್ಚಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಾಧ್ಯವಾಗುತ್ತದೆ. ಈ ರೀತಿ ಆರ್ಥಿಕ ಸಂಪನ್ಮೂಲಗಳ ಸಂಗ್ರಹಣೆಗೆ ಆದ್ಯತೆ ಹಾಗೂ ಸದ್ಬಳಕೆಗೆ ಕ್ರಿಯಾಯೋಜನೆಯಿಂದ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತದೆ.

ಎರಡನೇಯದಾಗಿ ಮಾನವ ಸಂಪನ್ಮೂಲಗಳ ಸದ್ಬಳಕೆ ಅಂದರೆ ಕೇವಲ ಸಿಬ್ಬಂದಿಗಳು ಮಾತ್ರ ಒಳಪಡುವುದಿಲ್ಲ. ಅಧ್ಯಕ್ಷರಾದಿಯಾಗಿ ಆಡಳಿತ ಮಂಡಳಿ ಸದಸ್ಯರು, ಸದಸ್ಯರು ಎಲ್ಲ ಸಿಬ್ಬಂದಿಯವರು ಮತ್ತು ಸಹಕಾರಿಯ ವೃತ್ತಿಪರ / ಕಾರ್ಯನಿರ್ವಹಣಾ ನಿರ್ದೇಶಕರು ಒಳಗೊಳ್ಳುತ್ತದೆ. ಅಧ್ಯಕ್ಷರ ನೇತೃತ್ವದಲ್ಲಿ ಆಡಳಿತ ಮಂಡಳಿಯವರು ಲಭ್ಯವಿರುವ ಎಲ್ಲಾ ಮಾನವ ಸಂಪನ್ಮೂಲಗಳನ್ನು ಹೇಗೆ ಬಳಸಿಕೊಳ್ಳಲು ಸಾಧ್ಯ ಎಂಬುದರ ಬಗ್ಗೆ ಕ್ರೀಯಾಯೋಜನೆ ಸಿದ್ಧಪಡಿಸಿ ಅದನ್ನು ಅನುಷ್ಠಾನಗೊಳಿಸುವುದು ಅಗತ್ಯ.

ಮೂರನೇಯದಾಗಿ ಸಹಕಾರಿಯ ವ್ಯಾಪ್ತಿಯಲ್ಲಿ ಇರುವ ಪ್ರಾಕೃತಿಕ ಸಂಪನ್ಮೂಲಗಳು, ಕೆರೆ ಕಾಲುವೆಗಳು, ಭಾವಿಗಳು, ಅರಣ್ಯ, ದನಕರುಗಳು, ಶಾಲಾ ಕಾಲೇಜುಗಳು ಸ್ವಯಂ ಸೇವಾ ಸಂಸ್ಥೆಗಳು, ಪ್ರದೇಶದಲ್ಲಿ ಬೆಳೆಯುವ ಬೆಳೆಗಳು, ಜಾನುವಾರಗಳು, ಗುಡಿಕೈಗಾರಿಕೆಗಳು, ಕುಲಕಸಬುಗಳು, ವೈದ್ಯಕೀಯ ಹಾಗೂ ಶಿಕ್ಷಣ ಸಂಸ್ಥೆಗಳು ಇವೆಲ್ಲವುಗಳ ಜೊತೆಗೂಡಿ ಕಾರ್ಯನಿರ್ವಹಿಸುವ ಮೂಲಕ ಸಹಕಾರಿ ಸಂಸ್ಥೆಗಳು ಬೆಳೆಯಬೇಕಾದ ಅಗತ್ಯತೆಯನ್ನು ಸಹಕಾರಿ ಸಂಸ್ಥೆಗಳ ಆಡಳಿತ ಮಂಡಳಿಯವರು ತಿಳಿದುಕೊಂಡು, ಕ್ರೀಯಾಯೋಜನೆ ಸಿದ್ಧಪಡಿಸಿ ಅನುಷ್ಠಾನ ಪಡಿಸಿದಲ್ಲಿ ಸಹಕಾರಿ ಕ್ಷೇತ್ರ ಇನ್ನು ಹೆಚ್ಚು ಉತ್ತಮವಾಗಿ ಸರ್ವವ್ಯಾಪಿಯಾಗಿ ಮತ್ತು ಸರ್ವಸ್ಪರ್ಶಿಯಾಗಿ ಕಾರ್ಯನಿರ್ವಹಿಸಲು ಸಾಧ್ಯ.

## "ನಿರ್ಮಲ ಮನಸ್ಸು"



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

ಮನಸ್ಸಿನ ಕುರಿತು ಚಿಂತನೆ ನಡೆದಿದೆ. ಮನಸ್ಸಿನಲ್ಲಿ ಭಾವನೆಗಳಿವೆ. ಆಲೋಚನೆಗಳಿವೆ, ವರುಷವರುಷಗಳ ನೆನಹು ಇದರಲ್ಲಿ ಸಂಗ್ರಹಗೊಂಡಿದೆ. ಬದುಕಿನ ಎಲ್ಲ ಅನುಭವಗಳ ಪರಿಣಾಮ ಇಲ್ಲುಂಟಾಗುತ್ತದೆ. ಮನಸ್ಸು ಎಲ್ಲದರೊಡನೆ ಬೆಳೆದು ಪುಷ್ಟವಾಗುತ್ತದೆ. ಅದನ್ನು ಚೆನ್ನಾಗಿ ಬೆಳೆಸಬೇಕು. ವಸ್ತುಗಳ ಜ್ಞಾನ ಎಷ್ಟು ಮಹತ್ವದ್ದೋ ಅಷ್ಟೇ ಮಹತ್ವದ್ದು ಈ ಮನಸ್ಸಿನ ಜ್ಞಾನ. ಮನಸ್ಸಿನಿಂದ ಭಾವನಾತ್ಮಕ ಜಗತ್ತನ್ನು ಕಟ್ಟಬಹುದು. ನಮ್ಮ ಸುಖದ ಸೌಧ ಮನಸ್ಸಿನ ಒಲವು ನೆನಹುಗಳನ್ನು ಅವಲಂಬಿಸಿದೆ. ಇದನ್ನು ಭಕ್ತಿಯ ಸಾಮ್ರಾಜ್ಯದಲ್ಲಿ ಬಾಳವವರು ಚೆನ್ನಾಗಿ ಬಳಸುತ್ತಾರೆ. ಮನುಷ್ಯನಿಗೆ ಏನು ಬೇಕೋ ಅದೆಲ್ಲ ಇದರಲ್ಲಿದೆ.

ಈ ಮನಸ್ಸನ್ನು ಆಗಿಂದಾಗ ಸ್ವಚ್ಛಗೊಳಿಸಬೇಕು. ಇದರಲ್ಲಿ ಹೊಲಸು ಬಂದು ಬೀಳುತ್ತಿರುತ್ತದೆ. ಅದನ್ನು ಸುಂದರ, ಶುಚಿ, ವಿಕಾಸಗೊಳಿಸುವುದೇ ಯೋಗ. ಯೋಗದ ಮೂಲಕ ಮನುಷ್ಯ ಅದ್ಭುತವಾದದ್ದನ್ನು ಸಾಧಿಸಬಹುದು. ನಮ್ಮನ್ನು ಕಟ್ಟಿ ಹಾಕುವುದು ಹಾಗೂ ಮುಕ್ತಗೊಳಿಸುವುದು ಎರಡೂ ಮಾಡುವುದು ಈ ಮನಸ್ಸೇ. ಅಷ್ಟು ಸಾಮರ್ಥ್ಯ ಇದಕ್ಕಿದೆ.

ಈ ಮನಸ್ಸನ್ನು ಶುಚಿ, ಸುಂದರ ಹಾಗೂ ವಿಕಸಿತವಾಗಿಡಬೇಕು. ಈ ಮೂರು ಕೆಲಸ ಮಾಡಬೇಕು. ಶುಚಿಯಿಂದ ಸೌಂದರ್ಯ ಹೆಚ್ಚುತ್ತದೆ. ಸಂತೋಷ ಕೊಡುವುದು ಶುಚಿ. ಮನಸ್ಸು ಹೊಲಸಾಗಿದ್ದರೆ ಅದು ಸುಂದರವಾಗಿರುವುದಿಲ್ಲ. ಅದು ಆಗ ಸುಖದ ಸಾಧನವಾಗುವುದಿಲ್ಲ. ಒಂದು ಬಗೆಯ ನೋವು, ದುಃಖದ ಸಾಧನವಾಗಿ ಮಾರ್ಪಡುತ್ತದೆ. ಮನೆಯ ಕಸವನ್ನು ಗೂಡಿಸುವಂತೆ ಮನಸ್ಸಿನ ಕಸವನ್ನು ಆಗಾಗ ಗೂಡಿಸಬೇಕು. ಮನಸ್ಸು ಉಲ್ಲಸಿತವಾಗಿರಬೇಕಾದರೆ ಅದು ಸ್ವಚ್ಛವಾಗಿರಬೇಕು. ಮನಸ್ಸಿನಲ್ಲಿ ಬೀಳುವ ಕಸ ಬಹಳ ವಿಚಿತ್ರ ಒಳಗೆ ಕಸ ಇರುವುದಿಲ್ಲ. ಆದರೆ ಹೊರಗಿನ ಕಸ ಒಳಗೆ ಬೀಳುತ್ತದೆ. ಹೂವಿನ ಸೌಂದರ್ಯವನ್ನು ಒಳಗೆ ಹಾಕಿಕೊಳ್ಳದೆ. ಸಣ್ಣ ಮುಳ್ಳನ್ನು ಮನಸ್ಸಿನಲ್ಲಿ ಹಾಕಿಕೊಳ್ಳುತ್ತೇವೆ. ಆಗ ಆ ಹೂವು ಹೇಳುತ್ತದೆ. "ನಾವೆಷ್ಟು ಸುಂದರವಿದ್ದಿವಲ್ಲ. ನಮ್ಮನ್ನು ನೋಡಿ, ಆ ಮುಳ್ಳವನ್ನು ಈಕೆ ನೋಡುತ್ತೀರಿ ? ಆದರೆ ಮನಸ್ಸು ಅದನ್ನು ಕೇಳುವುದಿಲ್ಲ. ಮನಸ್ಸು ಹಾಗೇ ಅದೇ ರೀತಿ ಈ ಜಗತ್ತು ಬಹಳ ಸುಂದರವಾಗಿದೆ. ಆದರೆ ಅದರ ಒಳ್ಳೆಯತನವನ್ನು ನೋದರೆ ಕೇವಲ ದೋಷಗಳನ್ನು ನೋಡುವುದು ಈ ಮನಸ್ಸಿನ ಸ್ವಭಾವ. ಇದರು ವಿಚಿತ್ರ ಮನಸ್ಸು ಮಲಿನವಿರುವುದನ್ನೆಲ್ಲಾ ಒಳಗೆ ಹಾಕಿಕೊಳ್ಳುತ್ತದೆ; ಎಲ್ಲಿ ದೋಷವಿರುತ್ತದೆಯೋ ಅದನ್ನೆಲ್ಲ ಮನಸ್ಸು ಒಳಗೆ ಹಾಕಿಕೊಳ್ಳುತ್ತದೆ. ಇದರಿಂದ ದುರ್ವಾಸನೆ ಆರಂಭವಾಗುತ್ತದೆ. ಇದು ಮನಸ್ಸಿನ ಕೆಲಸ. ಮನಸ್ಸಿನ ಈ ಕೆಲಸವನ್ನು ದೋಷ ಎಣಿಸುವುದು' ಎನ್ನುವರು. ಇದರಿಂದ ಮನಸ್ಸಿನ ಆರೋಗ್ಯ ಕೆಡುತ್ತದೆ. ಇದರರ್ಥ ದೋಷ ನೋಡಬಾರದೆಂದಲ್ಲ. ಆದರೆ ಒಳಗೆ ಹಾಕಿಕೊಳ್ಳವಾರದು. ಸಾಧ್ಯವಿದ್ದರೆ ಆ ಹೊಲಸನ್ನು ಸ್ವಚ್ಛ ಮಾಡಬೇಕು. ಮನಸ್ಸು ಸ್ವಚ್ಛವಿದ್ದಾಗ ಯೋಗ ಸಾಧ್ಯ.

ಒಬ್ಬ ಶ್ರೀಮಂತನಿದ್ದ, ಅವನಿಗೆ ಒಬ್ಬಳೆ ಮಗಳು, ಅವಳು ಮದುವೆ ವಯಸ್ಸಿಗೆ ಬಂದಿದ್ದಳು. ತಂದೆ ತಾಯಿ ವರಾನ್ವೇಷಣೆ ಆರಂಭಿಸಿದರು. ಅವಳು 'ದೋಷರಹಿತ' ವ್ಯಕ್ತಿಯನ್ನು ವರಿಸಬಯಸಿದ್ದಳು. ಬಂದ ವರಗಳಲ್ಲೆಲ್ಲಾ ಅವಳು ದೋಷ ಕಂಡುಹಿಡಿಯಲಾರಂಭಿಸಿದಳು. ನೂರಾರು ಜನರನ್ನು ನಿರಾಕರಿಸಿದಳು. ಎಲ್ಲ ಗುಣಗಳೂ ಒಬ್ಬರಲ್ಲಿಯೇ ಸಿಗುವುದಿಲ್ಲ. ಅವಳು ಪರಿಪೂರ್ಣತೆಯನ್ನು ಬಯಸಿದ್ದಳು. ಆಗ ತಂದೆ ಸ್ವಯಂವರವನ್ನು ಏರ್ಪಡಿಸಿದ ಆಗ ಪಕ್ಕದ ಊರಿನ ಒಬ್ಬ ಹುಡುಗನನ್ನು ಆಕೆ ಇಷ್ಟಪ್ಪಳು. ಆದರೆ ಈ ಹುಡುಗ ಇವಳನ್ನು ನಿರಾಕರಿಸಿದ, "ನಾನು ಹುಡುಕುತ್ತಿರುವ ಒಂದು ಗುಣವೂ ಇವಳಲ್ಲಿಲ್ಲ" ಎಂದ ! ಆಗ ಹುಡುಗಿ ಕಣ್ಣಲ್ಲಿ ನೀರು ಬಂದಿತು. ಈ ಜಗತ್ತೇ ಹೀಗೆ, ಇಲ್ಲಿ ಎಲ್ಲವೂ ಅಪೂರ್ಣ. ಆದ್ದರಿಂದ ನಾವು ನಮ್ಮ ದೃಷ್ಟಿಕೋನವನ್ನು ಪರಿಪೂರ್ಣಗೊಳಿಸಬೇಕು. ಇದ್ದಿದ್ದರಲ್ಲಿಯೇ ಸುಖದಿಂದಿರಬೇಕು. ತಲೆಯಲ್ಲಿ ಇಲ್ಲದ್ದನ್ನು ಹಾಕಿಕೊಂಡರೆ ಸ್ವರ್ಗವೂ ಸುಖ ಕೊಡುವುದಿಲ್ಲ.

ಒಬ್ಬ ಹುಡುಗ ಶಾಲೆಗೆ ಹೆಸರು ಹಚ್ಚಿದ. ಅವನ ತಾಯಿ ಶಾಲೆಗೆ ಬಂದು ಬಿಟ್ಟು ಹೋದಳು. ಆ ಬಾಲಕ ಮಂದಮತಿಯಾಗಿದ್ದ. ಬೇಗೆನೇ ಏನನ್ನೂ ಕಲಿಯುತ್ತಿರಲಿಲ್ಲ. ಒಂದು ವರ್ಷದ ನಂತರ ಶಿಕ್ಷಕ ಆ ತಾಯಿಯನ್ನು ಕರೆದು. "ನಿನ್ನ ಮಗ ನಿಷ್ಪ್ರಯೋಜಕ. ಇವನಿಗೆ ವಿದ್ಯೆ ಹತ್ತುವುದಿಲ್ಲ" ಎಂದ. ಆಗ ತಾಯಿ, "ನಿನಗೆ ಕಲಿಸಲು ಬರುವುದಿಲ್ಲ. ಇವನಿಗೆ ನಾನು ವಿದ್ಯೆಯನ್ನು ಕಲಿಸುತ್ತೇನೆ. ಒಂದು ದಿನ ಜಗತ್ತೇ ಇವನಿಗೆ ತಲೆಬಾಗುತ್ತದೆ. ಹಾಗೆ ಅವನನ್ನು ತಯಾರು ಮಾಡುತ್ತೇನೆ" ಎಂದಳು. ಆ ಹುಡುಗನಿಗೆ ಮನೆಯಲ್ಲಿಯೇ ಪಾಠ ಕಲಿಸಿದಳು. ಮುಂದೆ ಆ ಬಾಲಕನೇ ಥಾಮಸ್ ಆಲ್ವ ಎಡಿಸನ್ ಆದ. ಇಂದಿಗೂ ಇಡೀ ಜಗತ್ತು ಅವನ ಜ್ಞಾನಕ್ಕೆ ತಲೆಬಾಗುತ್ತದೆ.

ಜಗತ್ತಿನಲ್ಲಿ ಯಾವುದು ಅಪೂರ್ಣವೆನಿಸುತ್ತದೆಯೋ ಅದರಲ್ಲಿ ಪೂರ್ಣಾಂಶ ಎಲ್ಲೋ ಅಡಗಿರುತ್ತದೆ. ಅದನ್ನು ಗುರುತಿಸಬೇಕು. ನಮ್ಮಲ್ಲೇ ನಾವು ದೋಷಗಳನ್ನು ಹುಡುಕುತ್ತ ಹೋದರೆ ಹೇಗೆ? ಮನಸ್ಸಿನಲ್ಲಿ ಒಳ್ಳೆಯದನ್ನು ಹಾಕುತ್ತ ಹೋದರೆ ಜೀವನ ಅದ್ಭುತವಾಗುತ್ತದೆ. ಒಟ್ಟಿನಲ್ಲಿ ಮನಸ್ಸನ್ನು ಸ್ವಚ್ಛವಾಗಿಡಬೇಕು. ಹೊಲಸನ್ನು ಹೊರಗೆ ಚೆಲ್ಲಬೇಕು. ಕೆಟ್ಟದ್ದು ಕಂಡರೂ ಒಳ್ಳೆಯದನ್ನು ಒಳಗೆ ಹಾಕಬೇಕು. ಆಗ ಜೀವನ ಸಂತ ಜೀವನವಾಗುತ್ತದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 32,867 ಆಗಿರುತ್ತದೆ. ಇವುಗಳ ಪೈಕಿ 23,351 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 9,516

**ಜನವರಿ ತಿಂಗಳ ಪ್ರಕರಣಗಳು :** ದಾವಾ ಪ್ರಕರಣ 600 ಇತ್ಯರ್ಥಗೊಂಡ ಪ್ರಕರಣಗಳು 402.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 8,352 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1,576 ಪ್ರಕರಣಗಳು ಇತ್ಯರ್ಥಗೊಂಡಿದ್ದು, 6,776 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಜನವರಿ ತಿಂಗಳಿನಲ್ಲಿ ಒಟ್ಟು 293 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.

## ಕೇಂದ್ರ ಬಜೆಟ್ 2024 : ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರ 6ನೇ ಬಜೆಟ್

## ಬಡವರು, ನಾರಿಶಕ್ತಿ, ರೈತರು, ಯುವಶಕ್ತಿ ಕೇಂದ್ರಿತ ಬಜೆಟ್, 2047ರಲ್ಲಿ ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರ.



**ನವದೆಹಲಿ :** ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸುತ್ತಿರುವ 6ನೇ ಬಜೆಟ್ ಇದು. ಕೆಲವೇ ತಿಂಗಳಲ್ಲಿ ಲೋಕಸಭಾ ಚುನಾವಣೆ ಇರುವ ಕಾರಣ ಈ ಬಾರಿಯ ಬಜೆಟ್ ಭಾರೀ ಮಹತ್ವ ಪಡೆದುಕೊಂಡಿದೆ. ಮೋದಿ ಸರ್ಕಾರದ 2ನೇ ಅವಧಿಯ ಕೊನೆಯ ಹಾಗೂ ನೂತನ ಸಂಸತ್‌ನಲ್ಲಿ ಮೊದಲ ಬಾರಿಗೆ ಮಂಡನೆಯಾದ ಕೇಂದ್ರ ಬಜೆಟ್‌ನ ಮುಖ್ಯಾಂಶಗಳು ಇಂತಿವೆ:

- ಆದಾಯ ತೆರಿಗೆ ಮಿತಿಯಲ್ಲಿ ಈ ವರ್ಷ ಯಾವುದೇ ಬದಲಾವಣೆ ಇಲ್ಲ.
- ಕಳೆದ ವರ್ಷ ಘೋಷಿಸಿದ ರೀತಿ 7 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ಇಲ್ಲ. ಆದಾಯ ತೆರಿಗೆ ನೀತಿಯಲ್ಲೂ ಯಾವುದೇ ಬದಲಾವಣೆ ಇಲ್ಲ.
- ಹೊಸ ತೆರಿಗೆ ಪದ್ಧತಿ ಹಾಗೂ ಹಳೇ ತೆರಿಗೆ ಪದ್ಧತಿ ಹಾಗೆಯೇ ಇರಲಿದೆ.
- ಲಕ್ಷ ದ್ವೀಪ ಸೇರಿದಂತೆ ಹಲವೆಡೆ ಪ್ರವಾಸೋದ್ಯಮ ಅಭಿವೃದ್ಧಿಗೆ ಕ್ರಮ.
- ಎಲೆಕ್ಟ್ರಿಕ್ ವಾಹನ ಉತ್ಪಾದನೆ, ಚಾರ್ಜಿಂಗ್ ಸ್ಟೇಷನ್ ಹೆಚ್ಚಳಕ್ಕೆ ಆದ್ಯತೆ.
- ದೇಶದ ಹಲವು ನಗರಗಳಲ್ಲಿ ಮೆಟ್ರೋ ರೈಲು ಮಾರ್ಗ ವಿಸ್ತರಣೆಗೆ ಅನುದಾನ.
- 40 ಸಾವಿರ ರೈಲ್ವೆ ಬೋಗಿಗಳನ್ನು ವಂದೇ ಭಾರತ್ ಬೋಗಿಗಳಾಗಿ ಪರಿವರ್ತನೆ.
- ಉಡಾನ್ ಯೋಜನೆಗೆ 517 ಹೊಸ ಮಾರ್ಗ – ಸಣ್ಣ ನಗರಗಳಿಗೂ ವಿಮಾನ.
- ರಕ್ಷಣಾ ಇಲಾಖೆಗೆ ಬರೋಬ್ಬರಿ 11 ಲಕ್ಷ ಕೋಟಿ ರೂ. ಮೀಸಲು.
- ದೇಶದ ಒಂದು ಕೋಟಿ ಮಹಿಳೆಯರು 'ಲಕ್ಷಾಧಿಪತಿ ದೀದಿ' ಆಗಲಿದ್ದಾರೆ.
- ಆಶಾ, ಅಂಗನವಾಡಿ ಕಾರ್ಯಕರ್ತರಿಗೂ ಆಯುಷ್ಮಾನ್ ಭಾರತ ಯೋಜನೆ.
- 'ಜೈ ಜವಾನ್, ಜೈ ಕಿಸಾನ್, ಜೈ ವಿಜ್ಞಾನ್ ಹಾಗೂ ಜೈ ಅನುಸಂಧಾನ್' ಮೋದಿ ಸರ್ಕಾರದ ಮಂತ್ರ.
- ದೇಶಾದ್ಯಂತ ಒಂದು ಕೋಟಿ ಮನೆಗಳಿಗೆ ಸೌರ ವಿದ್ಯುತ್.
- ಮುಂದಿನ 5 ವರ್ಷಗಳಲ್ಲಿ 3 ಕೋಟಿ ಹೊಸ ಮನೆ ನಿರ್ಮಾಣ.
- 2047ಕ್ಕೆ ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರ.
- ಜಿಡಿಪಿಗೆ ಹೊಸ ಪರಿಭಾಷೆ ನೀಡಿದ ಕೇಂದ್ರ ಹಣಕಾಸು ಸಚಿವೆ. GDG ಎಂದರೆ – ಬೆಳವಣಿಗೆ, ಅಭಿವೃದ್ಧಿ ಹಾಗೂ ಪ್ರಗತಿ (Growth - Development - Progress )
- ಜಾಗತಿಕವಾಗಿ ಆರ್ಥಿಕ ಸಂಕಷ್ಟ ಸ್ಥಿತಿ ಇದ್ದರೂ ಭಾರತದ ಆರ್ಥಿಕತೆ ಸ್ಥಿರವಾಗಿದೆ.
- 10 ವರ್ಷಗಳಲ್ಲಿ ದೇಶದ ಆರ್ಥಿಕತೆಯಲ್ಲಿ ಅಗಾಧ ಬೆಳವಣಿಗೆ.
- 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ನಮ್ಮ ಧ್ಯೇಯ.
- ದೇಶದ 80 ಕೋಟಿ ಜನರಿಗೆ ಉಚಿತ ಅಕ್ಕಿ ವಿತರಣೆ.
- ಕಳೆದ 10 ವರ್ಷಗಳಲ್ಲಿ ಪ್ರಧಾನಿ ಮೋದಿ ಸಾರಥ್ಯದ ಸರ್ಕಾರದಲ್ಲಿ ಭಾರತದ ಆರ್ಥಿಕಾಭಿವೃದ್ಧಿ ನಾವು ಭ್ರಷ್ಟಾಚಾರ ಮುಕ್ತ ಆಡಳಿತ ನೀಡುತ್ತಿದ್ದೇವೆ.
- ಜನ್ ಧನ್ ಖಾತೆ ಮೂಲಕ ಜನರಿಗೆ ನೇರ ಲಾಭ ವರ್ಗಾವಣೆ ಯೋಜನೆ ಜಾರಿ ಮಾಡಲಾಗಿದೆ.
- ಯುವಕರು, ಬಡವರು, ಕೃಷಿಕರು ಹಾಗೂ ಮಹಿಳೆಯರು – ಈ ನಾಲ್ಕು ವರ್ಗಗಳನ್ನು ಗುರಿಯಾಗಿಸಿ ಕಾರ್ಯಕ್ರಮ ಕುಶಲ ಕರ್ಮಿಗಳಿಗಾಗಿ ವಿಶೇಷ ಯೋಜನೆ ರೂಪಿಸಿರುವ ಕೇಂದ್ರ ಸರ್ಕಾರ.

---

## ಇದೊಂದು ಅತ್ಯುತ್ತಮ, ದೂರದರ್ಶಿಯ ಹಾಗೂ ಅಭಿವೃದ್ಧಿ ಪಥದ ಬಜೆಟ್

### - ಶ್ರೀ ಮನೋಹರ ಮಸ್ಕಿ, ಸಂಸ್ಥಾಪಕ ಅಧ್ಯಕ್ಷರು, ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ. ಇವರ ವಿಶ್ಲೇಷಣೆ.



ದಿನಾಂಕ 01 ಹಾಗೂ 02ನೇ ಫೆಬ್ರವರಿ 2024ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು, ಆಡಳಿತ ಮಂಡಲಿ ಸದಸ್ಯರುಗಳಿಗಾಗಿ ಎರಡು ದಿನಗಳ "ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ" ಕಾರ್ಯಕ್ರಮದಲ್ಲಿ ಸುಕೋ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ಪ್ರಥಮ ಅಧ್ಯಕ್ಷರಾದ ಶ್ರೀ ಮನೋಹರ್ ಮಸ್ಕಿ ಇವರು 2024–25ನೇ ಸಾಲಿನ ಬಜೆಟ್ ವಿಶ್ಲೇಷಣೆ ಮಾಡಿದರು. 41% ಕ್ಕಿಂತಲ್ಲೂ ಹೆಚ್ಚು ಬಜೆಟ್‌ನ ಹಣವನ್ನು ಮೂಲಭೂತ ಸೌಕರ್ಯಗಳಿಗಾಗಿ ಮೀಸಲಾಗಿ ಇಟ್ಟಿರುವುದು ಇದು ದೇಶದಲ್ಲಿಯೇ ಪ್ರಥಮ ಹಾಗೂ ದೇಶದ ಅಭಿವೃದ್ಧಿಗೆ ಪೂರಕವಾಗಿದೆ.

ಎಲ್ಲ ರೀತಿಯ ಹಣಕಾಸು ಸಂಸ್ಥೆಗಳನ್ನು (ಸಹಕಾರಿ ಸಂಸ್ಥೆಗಳೂ ಸೇರಿದಂತೆ) ಬಲಪಡಿಸುವ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ ಹಾಗೂ 1 ಲಕ್ಷ ಕೋಟಿ ರೂ. ಹಣವನ್ನು ಸಂಶೋಧನಾ ಮತ್ತು ಅಭಿವೃದ್ಧಿಗಾಗಿ ಮೀಸಲಾಗಿರಿಸಿರುವುದು ಮುಂಬರುವ ದಿನಗಳಲ್ಲಿ ದೇಶದ ಅಭಿವೃದ್ಧಿಗೆ ಪೂರಕವಾಗಿದೆ ಎಂದು ವಿಶ್ಲೇಸಿದರು. ಲೋಕಸಭೆಯ ಚುನಾವಣೆಯು ಹತ್ತಿರವಿರುವುದರಿಂದ ಜನರಿಗೆ ಯಾವುದೇ ಆಮಿಷಗಳನ್ನು ತೋರಿಸದೆ ಒಳ್ಳೆಯ ಅಭಿವೃದ್ಧಿಯ ಬಜೆಟ್ ಇದಾಗಿದೆ ಎಂದು ತಿಳಿಸಿದರು.

## ಸಹಕಾರಿ ಸಚಿವರಾದ ಶ್ರೀ ಕೆ. ಎನ್. ರಾಜಣ್ಣ ಇವರಿಂದ ಸಂಯುಕ್ತ ಸಹಕಾರಿಯ ಕ್ಯಾಲೆಂಡರ್ ಹಾಗೂ ಡೈರಿ ಬಿಡುಗಡೆ ಹಾಗೂ ಮನವಿ ಸಲ್ಲಿಕೆ.




**ಬೆಂಗಳೂರು :** ದಿನಾಂಕ 18.01.2024 ರಂದು ಸಂಯುಕ್ತ ಸಹಕಾರಿಯ ವತಿಯಿಂದ ಮಾನ್ಯ ಸಹಕಾರ ಸಚಿವರಾದ ಶ್ರೀ ಕೆ ಎನ್ ರಾಜಣ್ಣ ಇವರನ್ನು ಭೇಟಿ ಮಾಡಿ ಸೌಹಾರ್ದ ಸಹಕಾರಿ ಕಾಯ್ದೆ ಮತ್ತು ಚಳುವಳಿ ಬಗ್ಗೆ ಚರ್ಚಿಸಲಾಯಿತು, ಇದೇ ಸಂದರ್ಭದಲ್ಲಿ ನೂತನ ವರ್ಷದ ಶುಭಾಶಯಗಳನ್ನು ಕೋರಿ ಸನ್ಮಾನಿಸಲಾಯಿತು ಮತ್ತು ಸಂಯುಕ್ತ ಸಹಕಾರಿಯ ನೂತನ ವರ್ಷದ ಡೈರಿ, ಕ್ಯಾಲೆಂಡರ್ ಗಳನ್ನು ಬಿಡುಗಡೆಗೊಳಿಸಲಾಯಿತು. ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಮಾನ್ಯ ನಿರ್ದೇಶಕರಾದ ಶ್ರೀ ಬಿ ಎಚ್ ಕೃಷ್ಣಾರೆಡ್ಡಿ, ಶ್ರೀ ಗುರುನಾಥ ಜಾಂತಿಕಾರ್, ಶ್ರೀ ಗುಂಡೂರಾವ್, ಶ್ರೀ ಸಿ.ಪಿ. ವಿಜಯ್ ಭಾಗವಹಿಸಿದ್ದರು ಹಾಗೂ ಮಾನ್ಯ ನಿಬಂಧಕರಾದ ಕ್ಯಾಪ್ಟನ್ ಡಾ॥ ಕೆ. ರಾಜೇಂದ್ರ ಭಾ.ಆ.ಸೇ. ಶ್ರೀ ದೇವಾಕರ್ ಸೇರಿದಂತೆ ಅಪರ ನಿಬಂಧಕರು, ಜಂಟಿ ನಿಬಂಧಕರು, ಉಪ ನಿಬಂಧಕರು, ಸಹಾಯಕ ನಿಬಂಧಕರು ಉಪಸ್ಥಿತರಿದ್ದರು. ಸಚಿವರನ್ನು ಭೇಟಿ ಮಾಡಿ ಮನವಿಯನ್ನು ಸಲ್ಲಿಸಲಾಯಿತು. ಸಚಿವರು ಸ್ಪಂದಿಸಿರುತ್ತಾರೆ. ಇದೇ ಸಂದರ್ಭದಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಅಗತ್ಯ ತಿದ್ದುಪಡಿಗೆ ಕ್ರಮ.

## ರಾಜ್ಯದ ಸೌಹಾರ್ದ ಸಹಕಾರಿಗಳ ಸಮಾಲೋಚನಾ ಸಭೆ
## ದಿನಾಂಕ : 09.01.2024 ಸ್ಥಳ : ಬೆಂಗಳೂರು
## ಸೌಹಾರ್ದ ಸಹಕಾರಿ ಕಾಯ್ದೆ ವ್ಯವಸ್ಥೆಯನ್ನು ಭದ್ರಗೊಳಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಲು ನಿರ್ಧಾರ




**ಬೆಂಗಳೂರು :** ದಿನಾಂಕ 09.01.2024 ರಂದು ನಗರದ ಮಲ್ಲೇಶ್ವರಂನಲ್ಲಿರುವ ಹವ್ಯಕ ಭವನದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ರಾಜ್ಯ ಮಟ್ಟದ ಸಮಾಲೋಚನಾ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಮಾಲೋಚನಾ ಸಭೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸುಮಾರು 500ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಭಾಗವಹಿದ್ದರು. ಈ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ವಹಿಸಿದರು.

ಈ ಸಮಾಲೋಚನಾ ಸಭೆಯಲ್ಲಿ ಪ್ರಮುಖವಾಗಿ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಗೆ ರಾಜ್ಯ ಸರ್ಕಾರದ ತಿದ್ದುಪಡಿಯನ್ನು ಮಾಡಲು ರಾಜ್ಯ ಮಟ್ಟದ ಸಮಿತಿಯನ್ನು ಮಾಜಿ ಸಹಕಾರ ಸಚಿವರಾದ ಹಾಲಿ ಹಾಗೂ ಶಾಸಕರಾದ ಶ್ರೀ ಲಕ್ಷ್ಮಣ ಸವದಿಯವರ ನೇತೃತ್ವದಲ್ಲಿ ರಚಿಸಿದೆ. ಈ ಸಮಿತಿ ರಾಜ್ಯದ 2 ಸಹಕಾರ ಕಾಯ್ದೆಗಳನ್ನು ಅಧ್ಯಯನ ಮಾಡಿ ಅಗತ್ಯ ತಿದ್ದುಪಡಿಗಳನ್ನು ಸೂಚಿಸಲಿದೆ. ಈ ತಿದ್ದುಪಡಿಗಳು ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಸಂಯುಕ್ತ ಸಹಕಾರಿ ಕಾರ್ಯಚಟುವಟಿಕೆಗಳಿಗೆ ಹೆಚ್ಚಿನ ಭದ್ರತೆ ಹಾಗೂ ಬಲ ನೀಡುವಂತೆ ಇರಬೇಕು ಎಂದು ತಿಳಿಸಿದರು. ರಾಜ್ಯದಲ್ಲಿ ಕಳೆದ 23 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 6127 ಸೌಹಾರ್ದ ಸಹಕಾರಿಗಳು ನೊಂದಣಿಯಾಗಿವೆ. 3500 ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. 65000ಕ್ಕಿಂತಲ್ಲೂ ಹೆಚ್ಚು ಜನರಿಗೆ ಉದ್ಯೋಗವನ್ನು ನೀಡಿದೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸಕಾಲದಲ್ಲಿ ಸಾಲ ಒದಗಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾ ಬಂದಿದೆ. ಕೆಲವೇ ಕೆಲವು ಸೌಹಾರ್ದ ಸಹಕಾರಿಗಳು ಠೇವಣಿದಾರರ ಮೊತ್ತವನ್ನು ತಮ್ಮ ಸ್ವಂತಕ್ಕೆ ಉಪಯೋಗಿಸಿ

ಠೇವಣಿದಾದದರಿಗೆ ವಾಪಸ್ಸು ನೀಡುವಲ್ಲಿ ವಿಫಲರಾಗಿರುವ ಕಾರಣ ಸೌಹಾರ್ದ ಸಹಕಾರಿ ಕಾಯ್ದೆ ಅಡಿಯಲ್ಲಿ ಸಂಯುಕ್ತ ಸಹಕಾರಿ ಕ್ರಮವಿಡುತ್ತಿದೆ. ಈ ಪ್ರಚಲಿತ ವಿದ್ಯಮಾನಗಳಿಗೆ ಸೌಹಾರ್ದ ಸಹಕಾರಿಗಳಿಗೆ ಮಾಹಿತಿ ನೀಡುವ ದೃಷ್ಟಿಯಿಂದ ಸಂಯುಕ್ತ ಸಹಕಾರಿ ರಾಜ್ಯಮಟ್ಟದ ಸಮಾಲೋಚನಾ ಸಭೆಯನ್ನು ಆಯೋಜನೆ ಮಾಡಿದೆ. ಇದರಲ್ಲಿ ವಂಚನೆಯ ಪ್ರಕರಣಗಳಲ್ಲಿ ಸಂಯುಕ್ತ ಸಹಕಾರಿಯು ಕಟ್ಟುನಿಟ್ಟಿನ ಕ್ರಮ ಜರುಗಿಸುವುದಕ್ಕೆ ಬದ್ಧವಾಗಿದೆ. ಎಂದು ತಿಳಿಸುತ್ತಾ ಸೌಹಾರ್ದ ಸಹಕಾ–ರಿಗಳು ಕಾಯ್ದೆ ನಿಯಮ ಉಲ್ಲಂಘನೆ ಆಗದಂತೆ ಹಣಕಾಸಿನ ಶಿಸ್ತನ್ನು ರೂಢಿಸಿಕೊಂಡು ಕಾರ್ಯನಿರ್ವಹಿಸಲು ಕರೆ ನೀಡಿದರು.

ಈ ಸಭೆಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಗೆ ಪ್ರತಿನಿಧಿಗಳಿಂದ ಸಲಹೆ ಹಾಗೂ ಅಭಿಪ್ರಾಯಗಳನ್ನು ಪಡೆದು ಮಾನ್ಯ ಸಹಕಾರ ಸಚಿವರಿಗೆ ಹಾಗೂ ತಿದ್ದುಪಡಿ ಸಮಿತಿಗೆ ಸಲ್ಲಿಸಲು ತೀರ್ಮಾನಿಸಲಾಯಿತು.

ಸಂಯುಕ್ತ ಸಹಕಾರಿ ನಿಯೋಗ ಮಾನ್ಯ ಸಹಕಾರ ಸಚಿವರಿಗೆ ಹಾಗೂ ಕಾಯ್ದೆ ತಿದ್ದುಪಡಿ ಸಮಿತಿಗೆ ಮನವಿ ಸಲ್ಲಿಸುವುದೆಂದು ತೀರ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರುಗಳಾದ ಶ್ರೀ ಗುರುನಾಥ ಜ್ಯಾಂತಿಕರ್, ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ಮಾಜಿ ಉಪಾಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ಆದ ಶ್ರೀ ಜಗದೀಶ್ ಕವಟಗಿಮಠ ಹಾಲಿ ಉಪಾಧ್ಯಕ್ಷರಾದ ಶ್ರೀ ಎ. ಆರ್. ಪ್ರಸನ್ನಕುಮಾರ್ ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿ ಸಲಹಾ ಸಮಿತಿಯ ಸದಸ್ಯರಾದ ಶ್ರೀ ಹೆಚ್. ವಿ. ರಾಜೀವ್ ರವರು ಮಾತನಾಡಿದರು.

ಮಾಜಿ ಶಾಸಕ ಹಾಗೂ ಶ್ರೀ ಗುರು ರಾಮಲಿಂಗೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಮಸ್ಕಿ, ಇದರ ಅಧ್ಯಕ್ಷರಾದ ಶ್ರೀ ಪ್ರತಾಪ್ ಗೌಡ ಪಾಟೀಲರವರು ಮಾತನಾಡಿ ಮಾನ್ಯ ಸಹಕಾರ ಸಚಿವರು ತುಂಬಾ ಅನುಭವ ಉಳ್ಳವರಾಗಿದ್ದಾರೆ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಕಾಳಜಿ ಇದೆ, ಸೌಹಾರ್ದ ಸಹಕಾರಿ ಕ್ಷೇತ್ರ ಹಾಗೂ ಸಂಯುಕ್ತ ಸಹಕಾರಿಯನ್ನು ಬಲಪಡಿಸುವ ನಿಟ್ಟಿನಲ್ಲಿ ತಿದ್ದುಪಡಿಗಳನ್ನು ಮಾಡಲು ಸಹಕರಿಸುತ್ತಾರೆ ಎಂಬ ನಂಬಿಕೆ ಇದೆ ಎಂದು ತಿಳಿಸಿದರು.

ಹಲವಾರು ಸೌಹಾರ್ದ ಸಹಕಾರಿಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸಿ ಈ ಬಗ್ಗೆ ಸಹಕಾರ ಮಂತ್ರಿಗಳಿಗೆ, ಸರ್ಕಾರಕ್ಕೆ ಮನವರಿಕೆ ಮಾಡಿ ವ್ಯವಸ್ಥೆಯನ್ನು ಸುಭದ್ರಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು. ಕಾರ್ಯಕ್ರಮದ ಸ್ವಾಗತವನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ ರವರು ನೆರವೇರಿಸಿದರು. ನಿರ್ದೇಶಕರಾದ ಶ್ರೀ ಶ್ರೀಧರ್‌ರವರು ವಂದನಾರ್ಪಣೆ ಸಲ್ಲಿಸಿದರು.



ಭಾಗವಹಿಸಿದ ಸೌಹಾರ್ದ ಸಹಕಾರಿಗಳು

**ಜನವರಿ 2024 ಸಂಚಿಕೆಯ ಅಧ್ಯಕ್ಷರ ನುಡಿಯಲ್ಲಿ ತಿದ್ದುಪಡಿ :**

ಜನವರಿ ಮಾಹೆಯ ಸ್ವಾಭಿಮಾನಿ ಸಹಕಾರಿ ಪತ್ರಿಕೆಯ ಅಧ್ಯಕ್ಷರ ನುಡಿಯಲ್ಲಿ ಕೆಲವು ಅಂಕಿ ಸಂಖ್ಯೆಗಳು ಸರಿಯಾಗಿ ಮುದ್ರಣವಾಗಿರುವುದಿಲ್ಲ. ಸರಿಪಡಿಸಿದ ವಿವರಗಳನ್ನು ಮರು ಮುದ್ರಿಸಲಾಗಿದೆ. ಓದುಗರು ಸಹಕರಿಸಲು ಕೋರಿದೆ.

**ತಿದ್ದುಪಡಿಯಾಗಿರುವ ವಿಷಯ :**

6000 ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ನೊಂದಣೆಯಾಗಿರುತ್ತವೆ. ಅದರಲ್ಲಿ 3500ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. 66 ಲಕ್ಷ ಸದಸ್ಯರು, 38,004 ಕೋಟಿ ಠೇವಣಿ, 3208 ಕೋಟಿ ನಿಧಿಗಳು, 29,591 ಕೋಟಿ ರೂಗಳ ಸಾಲ ವಿತರಣೆ, 42,954 ಕೋಟಿ ದುಡಿಯುವ ಬಂಡವಾಳ, ಎಂದು ಓದಿಕೊಳ್ಳುವುದು

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ ರಾಜ್ಯದ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರುಗಳಿಗಾಗಿ "ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ" ಕಾರ್ಯಕ್ರಮ

## ಸಹಕಾರಿ ಬ್ಯಾಂಕುಗಳು ಸ್ವಯಂ ನಿಯಂತ್ರಣ ಸಂಸ್ಥೆಗಳಾಗಲು ಕರೆ :

## - ಶ್ರೀ ಮನೋಹರ ಮಸ್ಕಿ, ಸಂಸ್ಥಾಪಕ ಅಧ್ಯಕ್ಷರು, ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ.



**ಬಳ್ಳಾರಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು, ಆಡಳಿತ ಮಂಡಲಿ ಸದಸ್ಯರುಗಳಿಗಾಗಿ ಎರಡು ದಿನಗಳ "ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ" ಕಾರ್ಯಕ್ರಮವನ್ನು ದಿನಾಂಕ 01 ಹಾಗೂ 02ನೇ ಫೆಬ್ರವರಿ 2024ರಂದು ವಿಜಯಶ್ರೀ ಹೆರಿಟೇಜ್ ವಿಲೇಜ್, ಹೊಸಪೇಟೆ ಇಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದ ಸುಕೋ ಸೌಹಾರ್ದ ಸಹಕಾರಿ ಬ್ಯಾಂಕಿನ ಮಾನ್ಯ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿರವರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಸೌಹಾರ್ದ ಪಟ್ಟಣ ಬ್ಯಾಂಕುಗಳು ಸ್ವಯಂ ನಿಯಂತ್ರಣ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

**ಸಹಕಾರಿ ಬ್ಯಾಂಕ್‌ಗಳು ತಮ್ಮ ಅಭಿವೃದ್ಧಿಗಾಗಿ ಬಲವಾದ ನೀತಿಯನ್ನು ರೂಪಿಸಬೇಕು – ಶ್ರೀ ಜಿ ನಂಜನಗೌಡ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ಸ.ನಿ., ಬೆಂಗಳೂರು.**

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಜಿ ನಂಜನಗೌಡ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ವಹಿಸಿದ್ದರು. ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್‌ನ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳ ಆಡಳಿತ ಮಂಡಳಿಯು ನವೀಕೃತ ಜ್ಞಾನವನ್ನು ಹೊಂದಿರಬೇಕು ಮತ್ತು ತಮ್ಮದೇ ಆದ ಸದೃಢ ಬ್ಯಾಂಕಿಂಗ್ ನೀತಿಯನ್ನು ಹೊಂದಿರಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ನಡೆಸಿಕೊಟ್ಟರು.

ಶ್ರೀ ವಿಶ್ವನಾಥ ಚ ಹಿರೇಮಠ, ಮಾನ್ಯ ಅಧ್ಯಕ್ಷರು, ವಿಕಾಸ್ ಸೌಹಾರ್ದ ಕೋ ಆಪರೇಟಿವ್ ಬ್ಯಾಂಕ್ ಲಿ.,ಹೊಸಪೇಟೆ, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮ ರೆಡ್ಡಿ ರವರು ಈ ಸಂದರ್ಭದಲ್ಲಿ ಮಾತನಾಡಿ ಬ್ಯಾಂಕುಗಳ ಬಲವಾದ ನೀತಿಯನ್ನು ಮತ್ತು ಬ್ಯಾಂಕುಗಳ ಸ್ವಯಂ ನಿಯಂತ್ರಣ ನೀತಿಯ ಅಗತ್ಯತೆಗಳನ್ನು ತಿಳಿಸಿದರು.

ಈ ತರಬೇತಿ ಕಾರ್ಯಕ್ರಮದಲ್ಲಿ 09 ಸೌಹಾರ್ದ ಸಹಕಾರಿ ಬ್ಯಾಂಕ್‌ಗಳಿಂದ ಒಟ್ಟು 21 ಪ್ರತಿನಿಧಿಗಳು ಭಾಗವಹಿಸಿದ್ದರು.

ಕಲಬುರಗಿ ಪ್ರಾಂತೀಯ ಕಛೇರಿಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆರವರು ಕಾರ್ಯಕ್ರಮದ ವಂದನಾರ್ಪಣೆಯನ್ನು ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ಲಿಮಿಟೆಡ್‌ನ ಸಂಸ್ಥಾಪಕ ಅಧ್ಯಕ್ಷರಾದ ಮನೋಹರ್ ಮಸ್ಕಿ ಇವರು ಮತ್ತು ಶ್ರೀ. ಜೆ ಪಿ ಸಾವೋಕರ್, ಡಿಜಿಎಂ(ನಿವೃತ್ತ), ಕೆನರಾ ಬ್ಯಾಂಕ್ ಬೆಂಗಳೂರು, ಶ್ರೀ. ಬಿ ಜೆ ಕುಲಕರ್ಣಿ, ಕಾರ್ಪೊರೇಟ್ ಟ್ರೈನರ್, ಬಳ್ಳಾರಿ, ಎಸ್ ಜಿ ಕುಲಕರ್ಣಿ, ಕಾರ್ಪೊರೇಟ್ ಟ್ರೈನರ್, ಬೆಂಗಳೂರು, ಶ್ರೀ. ಎನ್ ದರ್ಶನ್, ಎಸ್‌ಐಬಿ–ಎಸ್‌ಟಿಸಿ ಅಧ್ಯಾಪಕರು ಬೆಂಗಳೂರು, ಅವರು ವಿವಿಧ ವಿಷಯಗಳ ಕುರಿತು ಉಪನ್ಯಾಸ ನೀಡಿದರು.

---

**ದಕ್ಷಿಣ ಕನ್ನಡ :** ಪ್ರವೀಣ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಧ್ವಜಾರೋಹಣವನ್ನು ಶ್ರೀಯುತ ವೇಣುಗೋಪಾಲ ಭಟ್ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ ರಾಜ್ಯದ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರು/ಮುಖ್ಯಕಾರ್ಯನಿರ್ವಾಹಕರು ಮತ್ತು ಹಿರಿಯ ಅಧಿಕಾರಿಗಳಿಗಾಗಿ "ಉನ್ನತ ಮಟ್ಟದ ತರಬೇತಿ" ಕಾರ್ಯಕ್ರಮ

## ಸೌಹಾರ್ದ ಸಹಕಾರಿಗಳು ಕಾರ್ಪೋರೇಟ್ ಆಡಳಿತ ವ್ಯವಸ್ಥೆಯನ್ನು ಅಳವಡಿಸಲು ಕರೆ : - ಶ್ರೀ ಜಿ ನಂಜನಗೌಡ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



**ಬಳ್ಳಾರಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರು/ಮುಖ್ಯಕಾರ್ಯನಿರ್ವಾಹಕರು, ಹಿರಿಯ ಅಧಿಕಾರಿಗಳಿಗಾಗಿ ಎರಡು ದಿನಗಳ "ಉನ್ನತ ಮಟ್ಟದ ತರಬೇತಿ" ಕಾರ್ಯಾಗಾರವನ್ನು ದಿನಾಂಕ 02 ಹಾಗೂ 03ನೇ ಫೆಬ್ರವರಿ 2024ರಂದು ವಿಜಯಶ್ರೀ ಹೆರಿಟೇಜ್ ವಿಲೇಜ್, ಹೊಸಪೇಟೆ ಇಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ನೆರವೇರಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರು, ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳಲ್ಲಿ ತಮ್ಮ ಸದಸ್ಯರ ಅನುಕೂಲಕ್ಕಾಗಿ ಕಾರ್ಪೊರೇಟ್ ಆಡಳಿತವನ್ನು ಅಳವಡಿಸುವ ಅಗತ್ಯವನ್ನು ತಿಳಿಸಿದರು.

ಸೌಹಾರ್ದ ಸಹಕಾರಿ ಬ್ಯಾಂಕುಗಳು ಆಂತರಿಕ ಸಮಾಲೋಚನೆ ಮೂಲಕ ಕಾರ್ಯಕ್ಷಮತೆ ಹೆಚ್ಚಿಸಿಕೊಳ್ಳಲು ಸಲಹೆ –ಅಧ್ಯಕ್ಷರಾದ ಶ್ರೀ ವಿಶ್ವನಾಥ ಚ ಹಿರೇಮಠ, ವಿಕಾಸ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಅಧ್ಯಕ್ಷ ರಾದ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ವಿಕಾಸ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಅಧ್ಯಕ್ಷ ರಾದ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ವಿಶ್ವನಾಥ ಚ ಹಿರೇಮಠರವರು, ಕರ್ನಾಟಕದಲ್ಲಿರುವ 17 ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಬ್ಯಾಂಕಿಂಗ್ ಕ್ಷೇತ್ರದ ಪ್ರಸ್ತುತ ಸನ್ನಿವೇಶಕ್ಕೆ ಅನುಗುಣವಾಗಿ ಆಧುನಿಕ ತಂತ್ರಜ್ಞಾನಗಳನ್ನು ಒಳಗೊಳ್ಳುವ ಮೂಲಕ ಅವರು ತಮ್ಮ ಚಟುವಟಿಕೆಗಳನ್ನು ನವೀಕರಿಸಬೇಕು ಎಂದು ತಿಳಿಸದರು.

ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರಘುರಾಮ ರೆಡ್ಡಿ, ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ರವಿಸುಧಾಕರ್ ಮತ್ತು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಎಲ್.ಎಸ್.ಆನಂದ್ ರವರು ಮಾತನಾಡಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲರವರು ಕಾರ್ಯಕ್ರಮದ ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನು ನಡೆಸಿಕೊಟ್ಟರು.

ಈ ತರಬೇತಿ ಕಾರ್ಯಕ್ರಮದಲ್ಲಿ 13 ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳಿಂದ ಒಟ್ಟು 32 ಪ್ರತಿನಿಧಿಗಳು ಭಾಗವಹಿಸಿದ್ದರು.

## ತರಬೇತಿ ಕಾರ್ಯಕ್ರಮ ಸದುಪಯೋಗ ಪಡಿಸಿಕೊಳ್ಳಲು ಕರೆ : - ಶ್ರೀ ಎ ಆರ್ ಪ್ರಸನ್ನಕುಮಾರ್, ಉಪಾಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



**ಬಳ್ಳಾರಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಹಿರಿಯ ಅಧಿಕಾರಿಗಳಿಗಾಗಿ ಏರ್ಪಡಿಸಿದ್ದ "ಉನ್ನತ ಮಟ್ಟದ ತರಬೇತಿ" ಕಾರ್ಯಕ್ರಮದ ಸಮಾರೋಪ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಂಯುಕ್ತ ಸಹಕಾ–ರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನ ಕುಮಾರ್‌ರವರು ರಾಜ್ಯದಲ್ಲಿ 17 ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳು ಸಂಯುಕ್ತ ಸಹಕಾರಿಯ ವ್ಯಾಪ್ತಿಗೆ ಸೇರಿದ್ದು, ಇವುಗಳ ಪದಾಧಿಕಾರಿಗಳಿಗೆ, ಮುಖ್ಯಕಾರ್ಯನಿರ್ವಾಹಕರಿಗೆ, ಅಧಿಕಾರಿಗಳಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಹಲವಾರು ವಿಧವಾದ ತರಬೇತಿ ಕಾರ್ಯಕ್ರಮಗಳನ್ನು

ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳುತ್ತಾ ಬಂದಿದೆ. ಈ 17 ಬ್ಯಾಂಕುಗಳಿಗಿಂತಲೂ ಹೆಚ್ಚು ಬಂಡವಾಳ ಮತ್ತು ಸದಸ್ಯರನ್ನು ಹೊಂದಿದ್ದು, ಸೌಹಾರ್ದ ಸಹಕಾರಿಗಳು ಇದ್ದಾಗಿಯೂ ಸಹ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕುಗಳಿಗಾಗಿ ವಿಶೇಷ ತರಬೇತಿ ಶಿಬಿರಗಳನ್ನು ಆಯ್ಕೆ ಮಾಡಿ ಉತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ಕರೆಯಿಸಿ ಉನ್ನತ ಮಟ್ಟದ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿರುವುದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ತೀರ್ಮಾನವಾಗಿದೆ. ಹೀಗಾಗಿ ಈ ತರಬೇತಿ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕುಗಳ ಅಧ್ಯಕ್ಷರು, ಮುಖ್ಯಕಾರ್ಯನಿರ್ವಾಹಕರು, ಸಿಬ್ಬಂದಿಗಳು ಭಾಗವಹಿಸುವಂತ್ತಾಗಬೇಕು ತರಬೇತಿ ಕಾರ್ಯಕ್ರಮದ ಸಂಪೂರ್ಣ ಪ್ರಯೋಜನ ಪಡೆಯಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಸಮಾರೋಪ ಕಾರ್ಯಕ್ರಮದ ಸಮಾರೋಪ ಭಾಷಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಮಾತನಾಡಿ ತರಬೇತಿ ಕಾರ್ಯಕ್ರಮದಲ್ಲಿ ಶಿಬಿರಾರ್ಥಿಗಳಾಗಿ ಭಾಗವಹಿಸಿದ್ದ ಅಧ್ಯಕ್ಷರು, ಉಪಾಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು, ಹಿರಿಯ ಅಧಿಕಾರಿಗಳು ಕಾರ್ಯಕ್ರಮದ ಬಗ್ಗೆ ವ್ಯವಸ್ಥೆಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ತಿಳಿಸಿದರು ಮತ್ತು ಶಿಬಿರಾರ್ಥಿಗಳ ಅನಿಸಿಕೆಗಳಿಗೆ ಸಮಂಜಸವಾಗಿ ಸ್ಪಂಧಿಸಿದರು.

ಕಾರ್ಯಕ್ರಮದಲ್ಲಿ ಶಿಬಿರಾರ್ಥಿಗಳಾಗಿ ಕೆಂಪೇಗೌಡ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.,ದ ಅಧ್ಯಕ್ಷರಾದ ಶ್ರೀ ಎಲ್ ಲಿಂಗಣ್ಣರವರು, ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ.,ದ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಮಲ್ಲಿಕಾರ್ಜುನರವರು, ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.,ದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ರವಿ ಸುದರ್ಶನರವರು, ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.,ದ ಮುಖ್ಯಕಾರ್ಯನಿರ್ವಾಹಣಾಧಿಕಾರಿಯಾದ ಶ್ರೀ ನಾಗರಾಜ್ ತಮ್ಮ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು, ಕಾರ್ಯಕ್ರಮ ಅತ್ಯಂತ ಉನ್ನತ ಮಟ್ಟದ್ದಾಗಿದ್ದು, ಉತ್ತಮ ವ್ಯವಸ್ಥೆಗಳಿಂದ ಕೂಡಿತ್ತು ಎಂದು ತಿಳಿಸಿದರು.

ಒಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿ ಅಭಿವೃದ್ಧಿಯಾದ ಶ್ರೀ ರವಿಕುಮಾರ್ ರವರು ಕಾರ್ಯಕ್ರಮದ ವಂದನಾರ್ಪಣೆ ಮಾಡಿದರು.



ಗಣ್ಯರೊಂದಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸೌಹಾರ್ದ ಸಹಕಾರಿಗಳ ಅಧಿಕಾರಿಗಳು

## ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮ



**ಧಾರವಾಡ:** ದಿನಾಂಕ: 29.01.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತದ ಧಾರವಾಡ ಗದಗ ಮತ್ತು ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರಿಗೆ ಆಡಳಿತ ಪರಿಣಿತಿ ತರಬೇತಿ ಸಭೆಯನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ನೆರವೇರಿಸಿದರು. ವೇದಿಕೆ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿರವರು ವಹಿಸಿದ್ದರು. ಅತಿಥಿಗಳಾಗಿ ಶ್ರೀ ಎಸ್.ಜಿ ಜೋಶಿಯವರು, ಭಾಗವಹಿಸಿದ್ದರು. ವೇದಿಕೆ ಮೇಲೆ ಸಹಕಾರಿಗಳಾದ ಮಾನ್ಯ ಶ್ರೀ ಹೆಚ್ ವಿ ಭರಮಗೌಡ್ರ ಮತ್ತು ಶ್ರೀ ಹನಮಂತಪ್ಪ ವಡ್ಡರ್ ಮತ್ತು ವಸುಂಧರಾ ಸೌಹಾರ್ದ ಸಹಕಾರಿ ಅಧ್ಯಕ್ಷರು, ಉಪಸ್ಥಿತರಿದ್ದರು.

ವಿಷಯ 1: ಸಹಕಾರಿಗಳಿಗೆ ಆಡಳಿತ ಮಂಡಳಿಯವರಿಗೆ ನಿರ್ದೇಶಕರ ಹಕ್ಕುಗಳ ಮತ್ತು ಕರ್ತವ್ಯಗಳು.

ವಿಷಯ 2: ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ವಿಷಯದ ಕುರಿತು ಶ್ರೀ ಎಸ್ ಜಿ ಜೋಶಿ ಉಪನ್ಯಾಸಕರು ಮಾಹಿತಿ ನೀಡಿದರು.

ಧಾರವಾಡ ಗದಗ ಮತ್ತು ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ಮತ್ತು ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೆ ಸಿಬ್ಬಂದಿಗಳು ಸೇರಿ 134 ಸೌಹಾರ್ದ ಸಹಕಾರಿಗಳಿಂದ 183 ಜನ ಭಾಗವಹಿಸಿದ್ದರು

## ಸಂಯುಕ್ತ ಸಹಕಾರಿಯ ದಾವಾ ಪಂಚಾಯ್ತಿ ನ್ಯಾಯಾಲಯದ ಪೀಠಾಧಿಕಾರಿಯಾಗಿ ಶ್ರೀ ಮಂಜುನಾಥ ಎಮ್.ಪಿ ಸಹಕಾರ ಸಂಘಗಳ ಉಪ ನಿಬಂಧಕರು ಇವರು ಅಧಿಕಾರ ಸ್ವೀಕಾರ



**ಬೆಂಗಳೂರು :** ಸಹಕಾರ ಸಂಘಗಳ ನಿಬಂಧಕರ ಕಛೇರಿ, ಕರ್ನಾಟಕ ರಾಜ್ಯ, ಇವರ ಆದೇಶ ಸಂಖ್ಯೆ ಆರ್.ಸಿ.ಎಸ್./ಸಿಬ್ಬಂದಿ–1 ಸಿಆರ್–14/2023–24 ದಿನಾಂಕ 04.12.2023ರ ಪ್ರಕಾರ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ ಜಂಟಿ ನಿಬಂಧಕರು,(ನಿ–441) ಐಸಿಡಿಪಿ, ಬೆಂಗಳೂರು ಇವರನ್ನು ಅಧಿಕ ಪ್ರಭಾರದಲ್ಲಿ ಆದೇಶಿಸಲಾಗಿತ್ತು. ಸದರಿ ಆದೇಶವನ್ನು ಮಾರ್ಪಡಿಸಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಸಹಕಾರ ಸಂಘಗಳ ಉಪ ನಿಬಂಧಕರು, 1ನೇ ವಲಯ ಬೆಂಗಳೂರು ಇವರನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು,(ನಿ–441) ಸಹಕಾರ ಸಂಘಗಳ ದಾವಾ ಪಂಚಾಯ್ತಿ ನ್ಯಾಯಾಲಯ, ಬೆಂಗಳೂರು, ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಈ ಹುದ್ದೆಯ ಅಧಿಕ ಪ್ರಭಾರದಲ್ಲಿಸಿ ಆದೇಶಿಸಿರುತ್ತಾರೆ. ಈ ಆದೇಶದನ್ವಯ ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ ಕಿಶೋರ ಕುಮಾರ್, ಇವರು ದಿನಾಂಕ 05.12.2023ನ್ಯಾಯಾಲಯದ ಪ್ರಭಾರ ವಹಿಸಿಕೊಂಡಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ಕಛೇರಿ, ಕರ್ನಾಟಕ ರಾಜ್ಯ, ಇವರ ಆದೇಶ ಸಂಖ್ಯೆ ಆರ್.ಸಿ.ಎಸ್./ಸಿಬ್ಬಂದಿ–1 ಸಿಆರ್–14/2023–24 ದಿನಾಂಕ 04.12.2023ರ ಪ್ರಕಾರ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ ಉಪ ನಿಬಂಧಕರು, 1ನೇ ವಲಯ, ಬೆಂಗಳೂರು ಇವರನ್ನು ಅಧಿಕ ಪ್ರಭಾರದಲ್ಲಿ ಆದೇಶಿಸಲಾಗಿತ್ತು. ಸದರಿ ಆದೇಶವನ್ನು ಮಾರ್ಪಾಡು ಮಾಡಿ ಸಹಕಾರ ಸಂಘಗಳ ನಿಬಂಧಕರ ಕಛೇರಿ, ಕರ್ನಾಟಕ ರಾಜ್ಯ, ಇವರ ಆದೇಶ ಸಂಖ್ಯೆ ಆರ್.ಸಿ.ಎಸ್./ಸಿಬ್ಬಂದಿ–1 ಸಿಆರ್–14/2023–24 ದಿನಾಂಕ 20.01.2024ರ ಪ್ರಕಾರ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ ಉಪ ನಿಬಂಧಕರು 1ನೇ ವಲಯ ಇವರನ್ನು ಆಡಳಿತಾತ್ಮಕ ಕಾರಣಗಳಿಂದ ಬದಲಾವಣೆ ಮಾಡಿ ಕೂಡಲೇ ಜಾರಿಬರುವಂತೆ ಮುಂದಿನ ಆದೇಶದವರೆಗೆ ಸಹಕಾರ ಸಂಘಗಳ ಉಪ ನಿಬಂಧಕರು, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ಸಹಕಾರ ಸಂಘಗಳ ಉಪ ನಿಬಂಧಕರು(ನಿ–441)ರ ಹುದ್ದೆಯಲ್ಲಿ ಅಧಿಕ ಪ್ರಭಾರದಲ್ಲಿರಿಸಿ ಆದೇಶಿಸಲಾಗಿರುತ್ತದೆ. ಸದರಿ ಆದೇಶದ ಪ್ರಕಾರ ಶ್ರೀ ಮಂಜುನಾಥ ಎಮ್.ಪಿ ಸಹಕಾರ ಸಂಘಗಳ ಉಪ ನಿಬಂಧಕರು, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರು ದಿನಾಂಕ 22.01.2024ರಂದು ಪೂರ್ವಾಹ್ನ ಅಧಿಕಾರ ಸ್ವೀಕರಿಸಿರುತ್ತಾರೆ. ಈ ಸಂದರ್ಭದಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ನ್ಯಾಯಾಲಯದ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ದಿ ಬೆಳಗಾವಿ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸುವರ್ಣ ಮಹೋತ್ಸವ



**ಬೆಳಗಾವಿ :** ದಿ ಬೆಳಗಾವಿ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ಲಿ., ಬೆಳಗಾವಿ, ಸಹಕಾರಿಯು ತನ್ನ 50 ವರ್ಷಗಳನ್ನು ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ದಿನಾಂಕ 06.01.2024ರಂದು ಸುವರ್ಣ ಮಹೋತ್ಸವ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ, ಶ್ರೀ ಅರವಿಂದ ದೇಶಪಾಂಡೆ, ಸಹ ಪ್ರಾಂತ ಸಂಘಚಾಲಕರು, ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಕರ್ನಾಟಕ ಉತ್ತರ ಇವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರನ್ನು ಸಹಕಾರಿ ವತಿಯಿಂದ ಸನ್ಮಾನಿಸಲಾಯಿತು.

## ಸಂಯುಕ್ತ ಸಹಕಾರಿ ಹಾಗೂ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಸಂಯುಕ್ತಾಶ್ರಯದಲ್ಲಿ ಕ್ರೀಡೋತ್ಸವ




**ಕಲಬುರಗಿ :** ದಿನಾಂಕ 21.01.2024ರಂದು ಪ್ರಾಂತೀಯ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಕಲಬುರಗಿ ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರ ಸಹಯೋಗದೊಂದಿಗೆ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಕ್ರೀಡಾಕೂಟವನ್ನು ಆಯೋಜಿಸಲಾಗಿತ್ತು. ಮೊದಲಿಗೆ ಕ್ರೀಡಾ ಜ್ಯೋತಿಯನ್ನು ನಗರದ ಶ್ರೀ ಶರಣಬಸವೇಶ್ವರ ದೇವಸ್ಥಾನದಿಂದ ಎನ್.ವಿ ಮೈದಾನದ ಕ್ರಿಡಾಂಗಣಕ್ಕೆ ತರಲಾಯಿತು. ಕ್ರೀಡಾಕೂಟದ ಉದ್ಘಾಟನೆಯನ್ನು ಹೆಚ್.ಕೆ.ಇ ಅಧ್ಯಕ್ಷರಾದ ಶ್ರೀ ಭೀಮಾಶಂಕರ ಬಿಲಗುಂದಿ ನೆರವೇರಿಸಿದರು. ವೇದಿಕೆಯ ಮೇಲೆ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು, ಸಹಕಾರಿಗಳ ಜಂಟಿ ನಿಬಂಧಕರಾದ ಶ್ರೀ ವಿಶ್ವನಾಥ ಮಲಕೂಡ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಕಲಬುರಗಿ ಜಿಲ್ಲಾ ಒಕ್ಕೂಟ ಅಧ್ಯಕ್ಷರಾದ ಶ್ರೀ ಎಸ್. ಎಸ್ ಪಾಟೀಲರವರು ವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ನುಡಿದರು. ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಸ್ವಾಗತವನ್ನು ಕೋರಿದರು. ಒಕ್ಕೂಟದ ನಿರ್ದೇಶಕರಾದ ಶ್ರೀ ಮಹಾಂತಪ್ಪ ಆಲೂರೆಯವರು ವಂದನಾರ್ಪಣೆಯನ್ನು ಮಾಡಿದರು. ವೇದಿಕೆಯ ಮೇಲೆ ಒಕ್ಕೂಟದ ನಿರ್ದೇಶಕರು ಮತ್ತು ಪ್ರಾಂತೀಯ ವ್ಯವಸ್ಥಾಪಕರು ಉಪಸ್ಥಿತರಿದ್ದರು.

## ಕಲಬುರಗಿ ಸೌಹಾರ್ದ ಸಹಕಾರಿಗಳ ಕ್ರೀಡೋತ್ಸವ ಪ್ರಶಸ್ತಿ ಪ್ರಧಾನ ಸಮಾರಂಭ



**ಕಲಬುರಗಿ :** ದಿನಾಂಕ 24.01.2024 ರಂದು ಕಲಬುರಗಿ ಪ್ರಾಂತದ ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಕಲಬುರಗಿ ಜಿಲ್ಲಾ ಒಕ್ಕೂಟ ಮತ್ತು ಸಂಯುಕ್ತ ಸಹಕಾರಿಯ ಸಹಯೋಗದೊಂದಿಗೆ ಸೌಹಾರ್ದ ಸಹಕಾರಿಗಳ ದಿನಾಚರಣೆ ಮತ್ತು ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಸೌಹಾರ್ದ ಸಹಕಾರಿಗಳ ಜಾಥ ಕಾರ್ಯಕ್ರಮವನ್ನು ಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಸುರೇಶ ಸಜ್ಜನ ಹಸಿರು ಬಾವುಟ ತೋರಿಸುವ ಮೂಲಕ ಜಾಥಕ್ಕೆ ಚಾಲನೆ ನೀಡಿದರು. ಇದಕ್ಕೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ, ಶ್ರೀ ಜಿ. ಶ್ರೀಧರ. ಶ್ರೀಮತಿ ಶೈಲಜಾ ತಪಲಿಯವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ನೆರವೇರಿಸಿದರು. ಮುಖ್ಯಅತಿಥಿಗಳಾಗಿ, ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ, ಶ್ರೀ ಜಿ. ಶ್ರೀಧರ. ಶ್ರೀಮತಿ ಶೈಲಜಾ ತಪಲಿ, ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸೋಮಶೇಖರ ಗೋನಾಯಕ ಉಪಾಧ್ಯಕ್ಷರಾದ ಶ್ರೀ ಸುರೇಶ ಸಜ್ಜನ, ಚೆಂಬರ್ಸ್ ಆಫ್ ಕಾಮರ್ಸ್ ನ ಅಧ್ಯಕ್ಷರಾದ ಶ್ರೀ ಶಶಿಕಾಂತ ಪಾಟೀಲ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಕೊಪ್ಪಳ ಜಿಲ್ಲಾ ಒಕ್ಕೂಟದ ಮಾಜಿ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಲಬುರಗಿ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಎಸ್ ಪಾಟೀಲರವರು ವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ನುಡಿದರು. ಒಕ್ಕೂಟದ ನಿರ್ದೇಶಕರಾದ ಶ್ರೀ ಶಿವಶರಣಪ್ಪ ಶೆಟ್ಟಿ ಸ್ವಾಗತಿಸಿದರು. ಒಕ್ಕೂಟ ಉಪಾಧ್ಯಕ್ಷರಾದ ಶ್ರೀ ಮಹೇಶ ಪಾಟೀಲ ವಂದಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ವೀರಶೆಟ್ಟಿ ಕೆ ರವರು ನಿರೂಪಣೆ ಮಾಡಿದರು. ಇದೇ ಸಂದರ್ಭದಲ್ಲಿ ಕ್ರೀಡೆಯಲ್ಲಿ ವಿಜೇತರಾದ ಸಹಕಾರಿಗಳಿಗೆ ವೇದಿಕೆ ಮೇಲಿನ ಗಣ್ಯರಿಂದ ಪ್ರಮಾಣ ಪತ್ರ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆ, ಒಕ್ಕೂಟದ ನಿರ್ದೇಶಕರು, ವಿವಿಧ ಸಹಕಾರಿಗಳ ಸದಸ್ಯರು ಸಿಬ್ಬಂದಿಗಳು ಭಾಗವಹಿಸಿದ್ದರು.

# ಸಂಭ್ರಮದ ಗಣರಾಜ್ಯೋತ್ಸವ ಆಚರಣೆ

## ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ 75ನೇ ಗಣರಾಜ್ಯೋತ್ಸವ ದಿನಾಚರಣೆ.




**ಬೆಂಗಳೂರು** : ದಿನಾಂಕ 26.01.2024 ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ 75ನೇಯ ಗಣರಾಜ್ಯೋತ್ಸವಾದ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಹಾಗೂ ಕೇಂದ್ರ ಕಛೇರಿಯ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಮೈಸೂರು** : ದಿನಾಂಕ 26.01.2024 ರಂದು ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ಕಛೇರಿಯಲ್ಲಿ 75ನೇ ಗಣರಾಜ್ಯೋತ್ಸವದ ಪ್ರಯುಕ್ತ ಧ್ವಜಾರೋಹಣವನ್ನು ಮೈಸೂರು, ಮಂಡ್ಯ, ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಉಪಾಧ್ಯಕ್ಷರಾದ ಶ್ರೀ ವೆಂಕಟೇಶ ವಿ ಇವರು ನೆರವೇರಿಸಿದರು. ಸದರಿ ಕಾರ್ಯಕ್ರಮದಲ್ಲಿ ಸ್ಥಳೀಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಪ್ರಾಂತೀಯ ವ್ಯವಸ್ಥಾಪಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೆಳಗಾವಿ** : ದಿನಾಂಕ 26.01.2024 ರಂದು ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ 75ನೇ ಗಣರಾಜ್ಯೋತ್ಸವದ ಪ್ರಯುಕ್ತ ಧ್ವಜಾರೋಹಣವನ್ನು ಶ್ರೀ ಬಸವರಾಜ ರಾಮಪ್ಪ ಧವಳೆ, ಭಾರತೀಯ ಸೇನಾಧಿಕಾರಿಗಳು (ನಿವೃತ್ತ) ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸ್ಥಳೀಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ನಿರ್ದೇಶಕರು, ಸಿಬ್ಬಂದಿಗಳು, ಮತ್ತು ಪ್ರಾಂತೀಯ ವ್ಯವಸ್ಥಾಪಕರು ಹಾಗೂ ಕಛೇರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಕಲಬುರಗಿ** : ದಿನಾಂಕ 26.01.2024 ರಂದು ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಕಚೇರಿಯಲ್ಲಿ 75ನೇ ಗಣರಾಜ್ಯೋತ್ಸವ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು, ಸ್ಥಳೀಯ ಸಹಕಾರಿಯ ಪ್ರತಿನಿಧಿಗಳು ಹಾಗೂ ಪ್ರಾಂತದ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೀದರ** : ದಿನಾಂಕ 26.01.2024 ರಂದು ಬೀದರ ಜಿಲ್ಲಾ ಸಂಪರ್ಕ ಕಚೇರಿಯಲ್ಲಿ 75ನೇ ಗಣರಾಜ್ಯೋತ್ಸವದ ಪ್ರಯುಕ್ತ ಧ್ವಜಾರೋಹಣವನ್ನು ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ್ ರವರು ಧ್ವಜಾರೋಹಣ ನೆರವೇರಿಸಿದ್ದರು. ಈ ಸಂದರ್ಭದಲ್ಲಿ ಒಕ್ಕೂಟ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ್ ನಿರ್ದೇಶಕರಾದ ಶ್ರೀಕಾಂತ ಸ್ವಾಮಿ, ನಾಗಶೆಟ್ಟಿ ಪಾಟೀಲ್ ಡಾ ಅಣ್ಣರಾವ್, ಸಂಜೀವಕುಮಾರ ಸಜ್ಜನ, ಶ್ರೀಕಾಂತ ಮೋದಿ, ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ವೀರಶೆಟ್ಟಿ, ಓಂಕಾರ್ ಒಕ್ಕೂಟ ಸಿ.ಇ.ಓ ಅಮೃತ ಹೊಸಮನಿ ನಗರದ ಸಹಕಾರಿಗಳು, ಸಿಬ್ಬಂದಿಗಳು ಭಾಗವಹಿಸಿದ್ದರು

## ಜನವರಿ – 2024 : ಶಾಸನತ್ಮಾಕ ವಿಭಾಗದ ಕಾರ್ಯಚಟುವಟಿಕೆಗಳು

**ವಿಶೇಷಾಧಿಕಾರಿ ನೇಮಕದ ಕುರಿತು.**

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ ಹಿನ್ನಲೆಯಲ್ಲಿ 11 (ಹನ್ನೊಂದು) ಸೌಹಾರ್ದ ಕಾಯ್ದೆ ಕಲಂ 38ಎ ರನ್ವಯ ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

**ಸೌಹಾರ್ದ ಸಹಕಾರಿಗಳ ಸಮಾಪನಾಧಿಕಾರಿಯ ಬದಲಾವಣೆಯಾಗಿರುವ ಕುರಿತು:**

1. ಶ್ರೀ ಸಂಗಮೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಜಮಖಂಡಿ.
2. ಶ್ರೀ ಸೋಮಲಿಂಗೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಜಮಖಂಡಿ.
3. ಶ್ರೀ ಅಖಿಲ ಕ್ರೆಡಿಟ್ ಸೌಹಾರ್ದ ಪತ್ತಿನ ಸಹಕಾರಿ ನಿ., ತೇರದಾಳ.
4. ಅಮಾನತ ಪತ್ತಿನ ಸೌಹಾರ್ದ ಸಹಕಾರಿ ನಿ.,ತೇರದಾಳ.
5. ಸಿದ್ದಾರ್ಥ ಸೌಹಾರ್ದ ಅರ್ಬನ್ ಕ್ರೆಡಿಟ್ ಸಹಕಾರಿ ನಿ., ಜಮಖಂಡಿ.
6. ಸದ್ಗುರು ಸಿದ್ದಾರೂಡ ಸೌಹಾರ್ದ ಸಹಕಾರಿ ನಿ., ಶಾಂತಿನಗರ, ಹಿಪ್ಪರಗಿ.
7. ಸಿದ್ಧರೂಡ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಜಮಖಂಡಿ.
8. ಕರ್ನಾಟಕ ಅಲ್ಪಸಂಖ್ಯಾಂತರ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಬನಹಟ್ಟಿ
9. ಅಮೃತ ಸೌಹಾರ್ದ ಪತ್ತಿನ ಸಹಕಾರಿ ನಿ., ಜಮಖಂಡಿ.
10. ಶ್ರೀ ವರ್ಧಮಾನ ಸೌಹಾರ್ದ ಸಹಕಾರಿ ನಿ., ಜಮಖಂಡಿ. .
11. ಯುವಶಕ್ತಿ ಸೌಹಾರ್ದ ಸಹಕಾರಿ ನಿ., ಜಮಖಂಡಿ.
12. ಶ್ರೀ ಗಂಗಾಪರಮೇಶ್ವರಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚನಾಳ.
13. ಗಂಗಾಮಾತಾ ಸೌಹಾರ್ದ ಪತ್ತಿನ ಸೌಹಾರ್ದ ಸಹಕಾರಿ ನಿ., ಕಾಥರಕಿ
14. ಸೈದಾಪೂರ ಪತ್ತಿನ ಸೌಹಾರ್ದ ಸಹಕಾರಿ ನಿ.,ಸೈದಾಪೂರ.
15. ಕರ್ನಾಟಕ ಅರ್ಬನ್ ಸೌಹಾರ್ದ ಸಹಕಾರಿ ನಿ., ಶಾಂತಿನಗರ ಹಿಪ್ಪರಗಿ.

ಮೇಲ್ಕಂಡ ಸೌಹಾರ್ದ ಸಹಕಾರಿಗೆ ಈ ಹಿಂದೆ ಬಾಗಲಕೋಟೆ ಜಿಲ್ಲಾ ಸಂಯೋಜಕರಾಗಿದ್ದು ಶ್ರೀ ನಾಗರಾಜ್ ಜಿ.ಹೆಚ್., ಇವರು ಸಮಾಪನಾಧಿಕಾರಿಯಾಗಿ ನೇಮಕವಾಗಿದ್ದರು. ಪ್ರಸ್ತುತ ಸಮಾಪನಾಧಿಕಾರಿಗಳು ಶಿವಮೊಗ್ಗ ಜಿಲ್ಲೆಗೆ ವರ್ಗಾವಣೆಯಾದ ಹಿನ್ನಲೆಯಲ್ಲಿ ಸದರಿ ಸೌಹಾರ್ದ ಸಹಕಾರಿಗಳ ಸಮಾಪನಾಧಿಕಾರಿಯಾಗಿ ಶ್ರೀ ವೆಂಕಟೇಶ ರಾಠೋಡ್, ಹಿರಿಯ ಸಹಾಯಕರು ಹಾಗೂ ಬಾಗಲಕೋಟ ಜಿಲ್ಲಾ ಸಂಯೋಜಕರು ಇವರನ್ನು ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, ಜಮಖಂಡಿ ಇವರು ದಿನಾಂಕ 18.01.2024ರಂದು ನೇಮಕ ಮಾಡಿ ಆದೇಶ ಮಾಡಿರುತ್ತಾರೆ.

**ಶ್ರೀ ಆಶ್ರಯ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಳಗಾವಿ (ಬಿಜಿಎಮ್–0096)**

ಮೇಲ್ಕಂಡ ಸೌಹಾರ್ದ ಸಹಕಾರಿಗಳಿಗೆ ಈ ಹಿಂದೆ ಶ್ರೀ ಶ್ರೀಕಾಂತ್ ಬರುವೆ, ಉಪಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಇವರು ಸಮಾಪನಾಧಿಕಾರಿಯಾಗಿ ನೇಮಕವಾಗಿದ್ದರು. ತದನಂತರ ಸಮಾಪನಾಧಿಕಾರಿಗಳು ಸಂಯುಕ್ತ ಸಹಕಾರಿಯ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ ಹಿನ್ನಲೆಯಲ್ಲಿ ಸದರಿ ಸೌಹಾರ್ದ ಸಹಕಾರಿಯ ಸಮಾಪನಾಧಿಕಾರಿಯಾಗಿ ಶ್ರೀ ಬಸವರಾಜ್ ಹೊಂಗಲ, ಪ್ರಾಂತೀಯ ವ್ಯವಸ್ಥಾಪಕರು. ಕ. ರಾ.ಸೌ.ಸಂ.ಸ.ನಿ., ಬೆಳಗಾವಿ ಇವರನ್ನು ಮಾನ್ಯ ಸಹಕಾರಿಗಳ ಉಪ ನಿಬಂಧಕರು, ಬೆಳಗಾವಿ ಇವರು ದಿನಾಂಕ 12.01.2024ರಂದು ನೇಮಕ ಮಾಡಿ ಆದೇಶ ಮಾಡಿರುತ್ತಾರೆ.

## ರಾಜ್ಯದ ಸೌಹಾರ್ದ ಸಹಕಾರಿಗಳ ಗಮನಕ್ಕೆ

## ಸೌಹಾರ್ದ ಸಹಕಾರಿಗಳ ಸದಸ್ಯರಿಗೆ ಸಾಮಾನ್ಯ ಹಾಗೂ ಜೀವ ವಿಮೆಗಳಿಗಾಗಿ ಸಂಯುಕ್ತ ಸಹಕಾರಿ ಹಾಗೂ ಇಫ್ಕೋ ಟೋಕಿಯೋ ಜನರಲ್ ಇನ್ಸೂರೆನ್ಸ್ ಕಂಪನಿ ಜೊತೆ ಒಡಂಬಡಿಕೆ.

### ಸುತ್ತೋಲೆ

**ಇವರಿಗೆ:**
ಮಾನ್ಯ ಅಧ್ಯಕ್ಷರು/ ಮುಖ್ಯ ಕಾರ್ಯನಿರ್ವಾಹಕರು
ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು.

**ಮಾನ್ಯರೇ,**

**ವಿಷಯ : ಸೌಹಾರ್ದ ಸಹಕಾರಿಗಳು ಸದಸ್ಯರಿಗೆ ಸಾಮಾನ್ಯ ಮತ್ತು ಜೀವ ವಿಮಾ ಸೇವೆಗಳನ್ನು ಒದಗಿಸುವ ಕುರಿತು.**

**ಉಲ್ಲೇಖ :** 1. ದಿನಾಂಕ 13.07.2023 ರಂದು ನಡೆದ ಆಡಳಿತ ಮಂಡಲಿ ಸಭೆಯ ನಿರ್ಣಯ.
2. ಒಪ್ಪಂದ ಪತ್ರ ಸಹಿ ದಿನಾಂಕ 08.01.2024.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ ಸೌಹಾರ್ದ ಸಹಕಾರಿಗಳ ಜೊತೆ ಸಂಪರ್ಕ ಸಭೆಗಳನ್ನು ನಡೆಸುವ ಸಂದರ್ಭಗಳಲ್ಲಿ ಅನೇಕ ಸೌಹಾರ್ದ ಸಹಕಾರಿಗಳು ತಾವು ನೀಡುವ ಸಾಲಗಳಿಗೆ ವಿಮೆಯನ್ನು ಒದಗಿಸುವ ಕುರಿತು ಹಾಗೂ ಸೌಹಾರ್ದ ಸಹಕಾರಿಗಳಿಂದ ವಿಮಾ ಸೇವೆಯನ್ನು ನೀಡುವುದರ ಕುರಿತು ಸಲಹೆಯನ್ನು ನೀಡಿರುತ್ತಾರೆ. ಅದರಂತೆ, ದಿನಾಂಕ 19.09.2022ರಂದು ನಡೆದ ಸಾಮಾನ್ಯ ಸಭೆಯ ವಿಷಯ 23ರ ನಿರ್ಣಯದಂತೆ ಇನ್ಸೂರೆನ್ಸ್/ ಬ್ರೋಕರೇಜ್/ ಸೇವಾ ಪೂರೈಕೆದಾರ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿರುತ್ತದೆ. ಅದರಂತೆ, ಸಹಕಾರ ಕ್ಷೇತ್ರದಲ್ಲಿ ಇರುವ ವಿಮಾ ಪೂರೈಕೆದಾರರಾದ **ಇಫ್ಕೋ ಟೋಕಿಯೋ ಜನರಲ್ ಇನ್ಸೂರೆನ್ಸ್** ಸಂಸ್ಥೆಯೊಂದಿಗೆ ಮತ್ತು ಬ್ರೋಕರೇಜ್ ಕಂಪನಿಯಾದ **ಕಾರ್ಪೋರೇಟ್ ರಿಸ್ಕ್ ಇಂಡಿಯಾ ಇನ್ಸೂರೆನ್ಸ್ ಬ್ರೋಕರೇಜ್ ಪ್ರೈವೇಟ್ ಲಿ., ಇವರೊಂದಿಗೆ** ದಿನಾಂಕ 08.01.2024 ರಿಂದ ಅನ್ವಯವಾಗುವಂತೆ 3 ವರ್ಷದ ಅವಧಿಗೆ ವಿವಿಧ ವಿಮಾ ಉತ್ಪನ್ನಗಳ ಸೇವೆಯನ್ನು ಸೌಹಾರ್ದ ಸಹಕಾರಿಗಳ ಮೂಲಕ ಅವರ ಸದಸ್ಯರಿಗೆ ಒದಗಿಸಲು ತ್ರಿಪಕ್ಷೀಯ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ.

ಈ ಹಿನ್ನಲೆಯಲ್ಲಿ ಸಾಲ ವಿಮೆ, ಜೀವ ವಿಮೆ ಸೇರಿದಂತೆ ಇತರೆ ಹಲವು ರೀತಿಯ ವಿಮಾ ಸೌಲಭ್ಯವನ್ನು ಸದಸ್ಯರಿಗೆ ನೀಡಲು ಆಯಾ ಸೌಹಾರ್ದ ಸಹಕಾರಿಗಳು ತಮ್ಮ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ಸೇವೆ ಬಗ್ಗೆ ನಿರ್ಧರಿಸಬಹುದಾಗಿದ್ದು, ವಿಮಾ ಯೋಜನೆಯ ಪೂರ್ವದಲ್ಲಿ ಯೋಜನೆಯ ಬಗ್ಗೆ ಸಂಪೂರ್ಣ ಮಾಹಿತಿಗಳನ್ನು/ ಷರತ್ತುಗಳನ್ನು ಪರಿಶೀಲಿಸಿಕೊಂಡು ಅಂತಿಮಗೊಳಿಸುವುದು ಸೂಕ್ತವಾಗಿರುತ್ತದೆ. ಈ ಕೆಳಕಂಡ ವಿಮಾ ಸಂಸ್ಥೆ/ ವಿಮಾ ಬ್ರೋಕರೇಜರ್ಸ್‌ರವರೊಂದಿಗೆ ಚರ್ಚಿಸಿ, ಸೌಹಾರ್ದ ಸಹಕಾರಿಗಳು ತಮಗೆ ಸೂಕ್ತವಾದ ವಿಮಾ ಸೇವೆಗಳನ್ನು ಆಯ್ಕೆ ಮಾಡಿಕೊಂಡು ತಮ್ಮ ಆಡಳಿತ ಮಂಡಲಿಯ ನಿರ್ಣಯದೊಂದಿಗೆ ಒಪ್ಪಂದವನ್ನು ಮಾಡಿಕೊಂಡು ವಿಮಾ ಸೇವೆಯನ್ನು ಸದಸ್ಯರಿಗೆ ವಿತರಿಸಬಹುದಾಗಿದೆ ಎಂದು ಈ ಮೂಲಕ ತಿಳಿಸಿದೆ.

**ಸಂಪರ್ಕ ವಿವರ :**

| **ವಿಮಾ ಸಂಸ್ಥೆ:** | **ಬ್ರೋಕರೇಜ್ ಸಂಸ್ಥೆ:** |
|---|---|
| **ಇಫ್ಕೋ ಟೋಕಿಯೋ ಜನರಲ್ ಇನ್ಸೂರೆನ್ಸ್ ಕಂಪನಿ ಲಿ.,**<br>ಶ್ರೀ ಶಾಂತಿ ಟವರ್ಸ್, 4ನೇ ಮಹಡಿ, 3ನೇ ಮುಖ್ಯ ರಸ್ತೆ,<br>ಕಸ್ತೂರಿನಗರ, ಬೆಂಗಳೂರು-560043.<br>ಶ್ರೀ ವಿಜಯ್ - 9620866233 | **ಕಾರ್ಪೋರೇಟ್ ರಿಸ್ಕ್ ಇಂಡಿಯಾ ಇನ್ಸೂರೆನ್ಸ್ ಬ್ರೋಕರೇಜ್ ಪ್ರೈವೇಟ್ ಲಿ.,**<br>ಎಲ್-01, ಎಲ್ಐಸಿ ಕಾಲೋನಿ, 2ನೇ ಮಹಡಿ, 10ನೇ ಮುಖ್ಯರಸ್ತೆ,<br>ಜೀವನ್ ಭೀಮಾನಗರ, ಬೆಂಗಳೂರು-560075.<br>ಶ್ರೀ ಶ್ರೀನಿವಾಸ್- 9980864412 |

ಸೌಹಾರ್ದ ಸಹಕಾರಿಗಳು ವಿಮಾ ಸೇವೆಯನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ, ಯಾವುದೇ ಸಹಾಯಕ್ಕಾಗಿ/ ಮಾಹಿತಿಗಾಗಿ ಲಗತ್ತಿಸಿರುವ ಜಿಲ್ಲಾವಾರು ಇಫ್ಕೋ ಟೋಕಿಯೊ ಜನರಲ್ ಇನ್ಸೂರೆನ್ಸ್ ಸಂಸ್ಥೆಯ ಅಧಿಕಾರಿಗಳನ್ನು ಮತ್ತು ಸಂಯುಕ್ತ ಸಹಕಾರಿಯ ಆಯಾ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಲಗತ್ತು: 1. ಇಫ್ಕೋ ಟೋಕಿಯೊ ಜನರಲ್ ಇನ್ಸೂರೆನ್ಸ್ ಸಂಸ್ಥೆಯ ಅಧಿಕಾರಿಗಳ ಜಿಲ್ಲಾವಾರು ಪಟ್ಟಿ.

2. ಸಂಯುಕ್ತ ಸಹಕಾರಿಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳ ಸಂಪರ್ಕ ವಿವರಗಳು.

Karnataka State Souharda Federal Co-operative
Reg. No. RSR / SOU / ACT / 136 / Regn. 051/2001-02 Dated: 04-01-2002

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

## ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ಬೆಂಗಳೂರು :** ದಿನಾಂಕ 30.01.2024ರಂದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು/ಮಾರಾಟಾಧಿಕಾರಿಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ಸೌಹಾರ್ದ ಸಹಕಾರಿ ಸೌಧ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಕಲ್ಲಪ್ಪ ಓಬಣ್ಣಗೋಳ್, ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು, (ಕಾನೂನು ಕೋಶ), ಬೆಂಗಳೂರು ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡರಾವ್ ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಡಿ.ಎನ್. ನಾರಾಯಣ ಬಾಬು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ಇವರು ಉಪಸ್ಥಿತರಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಮ್ ಹಾಗೂ ಶ್ರೀ ಅನಿಲ್ ಕುಮಾರ್ ಎಮ್. ಇವರು ಭಾಗವಹಿಸಿದ್ದರು. ಒಟ್ಟು 87 ಸೌಹಾರ್ದ ಸಹಕಾರಿಗಳಿಂದ 110 ಪ್ರತಿನಿಧಿಗಳು ಭಾಗವಹಿಸಿದ್ದರು.

## ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ತರಬೇತಿ ಕಾರ್ಯಕ್ರಮ ಹಾಗೂ ಭೇಟಿ

**ಯಾದಗಿರಿ :** ದಿನಾಂಕ : 27.01.2024 ರಂದು ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ನಷ್ಟದಲ್ಲಿರುವ ಕೆಲವು ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿರವರು ಮತ್ತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತರವರ ಉಪಸ್ಥಿತಿಯಲ್ಲಿ ಶಹಾಪುರ ಸಮೃದ್ಧಿ ಸೌಹಾರ್ದ ಪತ್ತಿನ ಸಹಕಾರಿಯಲ್ಲಿ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಮಾನ್ಯ ನಿರ್ದೇಶಕರನ್ನು ಮತ್ತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರನ್ನು ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು. ಶಹಾಪುರ ಸಮೃದ್ಧಿ ಸೌಹಾರ್ದ ಪತ್ತಿನ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು,ಸಿಬ್ಬಂದಿ ವರ್ಗದವರು ಮತ್ತು ಯಾದಗಿರಿ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಪವನ ಉಪಸ್ಥಿತರಿದ್ದರು.

**ಯಾದಗಿರಿ :** ದಿನಾಂಕ : 27.01.2024 ರಂದು ಶಹಾಪುರ ಶ್ರೀ ವೈಷ್ಣವಿ ಸೌಹಾರ್ದ ಪತ್ತಿನ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ರವರು ಭೇಟಿ ನೀಡಿ ಸಹಕಾರಿಯ ಅಭಿವೃದ್ಧಿಯ ಕುರಿತು ಸೂಕ್ತ ಮಾಗದರ್ಶನವನ್ನು ನೀಡಿದರು. ನಂತರ ಮಾನ್ಯ ನಿರ್ದೇಶಕರನ್ನು ಮತ್ತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರನ್ನು ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿ ವರ್ಗದವರು ಮತ್ತು ಯಾದಗಿರಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಪವನ ಉಪಸ್ಥಿತರಿದ್ದರು.



ಹಿರಿಯಡ್ಕ ರಾಜೇಶ್ ಪ್ರಸಾದ್ I.A.S ಪ್ರಿನ್ಸಿಪಾಲ್ ಸೆಕ್ರೆಟರಿ ಡೆಲ್ಲಿ ಮತ್ತು ಜಮ್ಮುಕಾಶ್ಮೀರ ಇವರು ದಿನಾಂಕ 04–01–2024 ನೇ ಗುರುವಾರ ಹಂಸ ಚೈತನ್ಯ ಸೌಹಾರ್ದ ಸಹಕಾರಿ ಮತ್ತು ಹಂಸ ಚೈತನ್ಯ ದೇಶಿ ಮಳಿಗೆಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಸುಧೀಶ್ ನಾಯಕ್, ಉಪಾಧ್ಯಕ್ಷರಾದ ಸುದರ್ಶನ್ ಆಚಾರ್ಯ, ನಿರ್ದೇಶಕರಾದ ಹರೀಶ್ ಬೋರ್ಕರ್, ಸವಿತಾ ನಾಯಕ್, ಜಯ ಪೂಜಾರಿ, ನಾಗರಾಜ್ ಪ್ರಭು ಉಪಸ್ಥಿತರಿದ್ದರು ಹಿರಿಯ ಸಹಕಾರಿಗಳಾದ ರಮಾನಂದ ನಾಯಕ್, ಡಾ. ಗಿರಿಧರ ಕಂಠಿ, ವಕೀಲರಾದ ರವಿರಾಜ್ ಮತ್ತು ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಸಿಬ್ಬಂದಿಗಳು ಭಾಗಿಯಾಗಿದ್ದರು.

ರಾಜೇಶ್ ಪ್ರಸಾದ್ ರವರು ಹಿರಿಯ ಸಹಕಾರಿಗಳು ಸಿಬ್ಬಂದಿಗಳೊಂದಿಗೆ ಸಂವಾದ ನಡೆಸಿದರು. ಸಹಕಾರಿ ಕ್ಷೇತ್ರವು ಬಡಜನತೆಗೆ ದಾರಿದೀಪವಾಗುವ ಕ್ಷೇತ್ರ, ಇದರಲ್ಲಿ ನೀವು ಸೇವೆ ಮಾಡುತ್ತಿರುವುದು ಶ್ಲಾಘನೀಯ. ನಿಮ್ಮ ಸಂಸ್ಥೆ, ಮುಂದೆ ಉತ್ತಮವಾಗಿ ಬೆಳೆಯಲಿ ಎಂದು ಹಾರೈಸಿದರು. ಸುಧೀಶ್ ನಾಯಕ್ ರವರು ಮತ್ತು ನಾವು ಒಟ್ಟಿಗೆ ಕಾಲೇಜಿನ ಹಾಸ್ಟೆಲ್ ನಲ್ಲಿ ಓದಿದವರು ಅವರು ನಮಗೆ ತುಂಬಾ ಆತ್ಮೀಯರು, ಅವರ ಸಹಕಾರಿ ಕ್ಷೇತ್ರದ ಸಾಧನೆಗೆ ತಿಳಿಸಿದರು.

## ರಜತ ಮಹೋತ್ಸವ

### ಯೋಗ, ಸುಯೋಗ, ಸಹಯೋಗದಿಂದ ಸಹಕಾರಿ ಬ್ಯಾಂಕುಗಳ ಅಭಿವೃದ್ಧಿ

### - ಶ್ರೀ ಗವಿಮಠ ಶ್ರೀ ಗವಿಸಿದ್ದೇಶ್ವರ ಸ್ವಾಮಿಜೀ



**ಬಳ್ಳಾರಿ :** ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನ ರಜತ ಮಹೋತ್ಸವದ ಕಾರ್ಯಕ್ರಮವನ್ನು ಶ್ರೀ ಗವಿಮಠದ ಶ್ರೀ ಗವಿಸಿದ್ದೇಶ್ವರ ಸ್ವಾಮಿಗಳು ಹಾಗೂ ಭಾರತೀಯ ರಿಸರ್ವ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಮೀನಾಕ್ಷಿ ಗಡರವರು ಉದ್ಘಾಟಿಸಿದರು. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ ಎಸ್ ನಾಗರಾಜರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕರ್ನಾಟಕ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರು, ಬಳ್ಳಾರಿ ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ ಬಿ ಎ ಕೇಸರಿಮಠ ಹಾಗೂ ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಶ್ವನಾಥ ಚ. ಹಿರೇಮಠರವರು ಮತ್ತು ನಿವೃತ್ತ ಆರ್‌ಬಿಐ ಅಧಿಕಾರಿಗಳಾದ ಶ್ರೀ ಡಿ ಎಚ್ ಪಾಟೇಲರವರು ಅತಿಥಿಗಳಾಗಿ ಉಪಸ್ಥಿತಿ ಇದ್ದರು. ಈ ಸಂದರ್ಭದಲ್ಲಿ ಬ್ಯಾಂಕಿನ ಉನ್ನತಿಗೆ ಪರೋಕ್ಷವಾಗಿ ಸಹಕರಿಸಿದ 25 ಗಣ್ಯರಿಗೆ ಸನ್ಮಾನಿಸಿದ್ದು ವಿಶೇಷವಾಗಿತ್ತು.

---



**ಬೆಂಗಳೂರು :** ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತವು ಬೆಂಗಳೂರಿನ ವಿಶ್ವೇಶ್ವರಪುರಂನಲ್ಲಿ ಆಡಳಿತ ಕಛೇರಿ ಮತ್ತು ಬೆಂಗಳೂರಿನ ಸುತ್ತಮುತ್ತ 6 ಶಾಖೆಗಳನ್ನು ಹೊಂದಿದ್ದು, ಮಾರ್ಚ್ 2023ನೇ ಅಂತ್ಯಕ್ಕೆ ಒಟ್ಟು 10,146 ಸದಸ್ಯರು, ರೂ.383.26 ಕೋಟಿ ಠೇವಣಿಗಳು, ರೂ.256.43 ಕೋಟಿ ಮುಂಗಡಗಳು, ರೂ.9.19 ಕೋಟಿ ನಿವ್ವಳ ಲಾಭ ಮತ್ತು ಒಟ್ಟಾರೆ ಸುಮಾರು 650 ಕೋಟಿ ವ್ಯಾಪಾರ-ವಹಿವಾಟುಗಳನ್ನು ಹೊಂದಿದ್ದು, ಭಾರತೀಯ ರಿಸರ್ವ್ ಬ್ಯಾಂಕ್ ನಿಯಮಗಳ ಪ್ರಕಾರ Financially Sound and Well Managed(FSWM) ಬ್ಯಾಂಕ್ ಆಗಿ ಕಾರ್ಯನಿರ್ವಹಿಸುತ್ತಿದೆ.

ಸದರಿ ಬ್ಯಾಂಕ್ 1998 ರಲ್ಲಿ ಪ್ರಾರಂಭವಾಗಿದ್ದು, ಇದರ ರಜತ ಮಹೊತ್ಸವ ಸಮಾರಂಭವನ್ನು ದಿನಾಂಕ 24/12/2023, ಭಾನುವಾರ ದಂದು ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಹೊಸೂರು ಮುಖ್ಯ ರಸ್ತೆ, ಲಕ್ಕಸಂದ್ರ, ಬೆಂಗಳೂರು, ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ. ಸದಾಶಿವ ರೆಡ್ಡಿ ಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಸಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ನಿವೃತ್ತ ನ್ಯಾಯಾಮೂರ್ತಿಗಳಾದ ಶ್ರೀ. ಹೆಚ್.ಎನ್. ನಾಗಮೋಹನ್ ದಾಸ್‌ರವರು, ಭಾರತೀಯ ರಿಸರ್ವ್ ಬ್ಯಾಂಕ್, ಬೆಂಗಳೂರು ಪ್ರಾಂತೀಯ ಕಛೇರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ. ಮೀನಾಕ್ಷಿ ಗಡ ರವರು, ನಿವೃತ್ತ ಅಪರ ನಿಬಂಧಕರಾದ ಶ್ರೀ. ಎಂ. ವೆಂಕಟರೆಡ್ಡಿಯವರು ಮತ್ತು ನಿವೃತ್ತ ಐ.ಪಿ.ಎಸ್ ಅಧಿಕಾರಿಯಾದ ಶ್ರೀ. ರಾಮಸುಬ್ಬರವರು ನೆರವೇರಿಸಿದರು.

ಕಾರ್ಯಕ್ರಮದ ಉದ್ಘಾಟನೆ ಮತ್ತು ಮುಖ್ಯ ಅತಿಥಿಗಳ ಭಾಷಣದ ನಂತರ ರಜತ ಮಹೋತ್ಸವದ ನೆನಪಿಗಾಗಿ "ಶ್ರೀನಿಧಿ ರಜತ ಕುಸುಮ" ಎಂಬ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

---

**ಮಂಗಳೂರು :** ಮಿರಾಕಲ್ಸ್ ಆಫ್ ಮಿಲಾಗ್ರೀಸ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ಹಂಪನಕಟ್ಟ ಮಂಗಳೂರು, ಇಲ್ಲಿ ಜನವರಿ 01 2024 ರಂದು ಸೌಹಾರ್ದ ಸಹಕಾರಿ ದಿನಾಚರಣೆ ಕಾರ್ಯಕ್ರಮವನ್ನು ಆಚ-ರಿಸಲಾಗಿದ್ದು ಮುಖ್ಯ ಅಥಿತಿಯಾಗಿ ಆಲ್ವಿನ್ ನೊರೋನ್ಹ ಉಪಸ್ಥಿತರಿದ್ದರು ಹಾಗೂ ಗೌರವಾನ್ವಿತ ಅಥಿತಿಗಳಾದ ಸಚ್ಚಿದಾನಂದ ಶೆಟ್ಟಿ ನಿವೃತ್ತ ಬ್ಯಾಂಕ್ ಮ್ಯಾನೇಜರ್ ಹಾಗೂ ಲೇಖಕರು ಮತ್ತು ಬದಿಯಡ್ಕ ಮೊಯಿದೀನ್ ಕುಂ undefined, ನಿವೃತ್ತ ಬ್ಯಾಂಕ್ ಮ್ಯಾನೇಜರ್ ಇವರಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸರಕಾರಿ ಪದವಿ ಪೂರ್ವ ಕಾಲೇಜಿನ 4 ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

**ಕೊಡಗು :** ನಂ.561ನೇ ಕೊಡಗು ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ ಸಹಕಾರಿಯಲ್ಲಿ ದಿನಾಂಕ 01.01.2024 ರಂದು ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಸಹಕಾರಿಯ ನಿರ್ದೇಶಕರಾದ ಶ್ರೀ ಕೊಂಗಾಂಡ ಎ. ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ



**ಮೈಸೂರು** : ದಿನಾಂಕ 12–01–2024 ರಂದು ಪ್ರಗತಿ ಪರಿವರ್ತನ ಸೌಹಾರ್ದ ಸಹಕಾರಿಯ ಶುಕ್ರವಾರ ಪದಾಧಿಕಾರಿಗಳ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಶ್ರೀಮತಿ ಲಲಿತ ಕೆಎಸ್ ಮತ್ತು ಉಪಾಧ್ಯಕ್ಷರಾಗಿ ಶ್ರೀಮತಿ ಭಾಗ್ಯಮ್ಮ ಸಿ ರವರು ಆಯ್ಕೆಯಾಗಿರುತ್ತಾರೆ.




**ಮೈಸೂರು** : ದಿನಾಂಕ 05–01–2024 ರಂದು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದಲ್ಲಿ ತೆರವಾಗಿದ್ದ ಉಪಾಧ್ಯಕ್ಷರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಶ್ರೀ ವೆಂಕಟೇಶ್ ವಿ ಅವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

### ಅರಿಹಂತ ಸೌಹಾರ್ದ ಸಹಕಾರಿ ಸಂಘ ನಿ., ಹಲ್ಲೋಳಿ, ಬೆಳಗಾವಿ



ಶ್ರೀ ಭರಮಪ್ಪಾ ಬಾಬು ಚೌಗಲಾ
ಅಧ್ಯಕ್ಷರು



ಶ್ರೀ ಬಾಹುಬಲಿ ಭರಮಪ್ಪಾ ನಾಗನೂರಿ
ಉಪಾಧ್ಯಕ್ಷರು

### ಅಮೃತ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ, ಅಮೃತ, ಗರತಿಕೆರೆ



ಶ್ರೀ ಕಿರಣ ಜೆ.ಪಿ
ಅಧ್ಯಕ್ಷರು



ಶ್ರೀ ಸೋಮಶೇಖರ ಟಿ.ಡಿ
ಉಪಾಧ್ಯಕ್ಷರು

### ಕಮಲಾಪೂರ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ



ಶ್ರೀ ಶಿವಶರಣಪ್ಪ ಶೆಟ್ಟಿ
ಅಧ್ಯಕ್ಷರು



ಶ್ರೀ ಜಯಪಾಲ ರತ್ನಾಕರ
ಉಪಾಧ್ಯಕ್ಷರು



**ಮಂಡ್ಯ** : ಮಂಡ್ಯ ವರ್ತಕರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ ಅಧ್ಯಕ್ಷರಾಗಿ ಶ್ರೀ ಮಹೇಂದ್ರಬಾಬು ಎಂ ಪಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಆರ್ಥರ್ ಎಫ್ರಾಹಿಮ್ ಲುಯಿಸ್ ಇವರು ಆಯ್ಕೆಯಾಗಿರುತ್ತಾರೆ.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 75ನೇ ಗಣರಾಜ್ಯೋತ್ಸವ ದಿನಾಚರಣೆಯ ಆಚರಣೆಯ ವರದಿಗಳು



ದಿನಾಂಕ 26.01.2024 ರಂದು ಪೋತ್ನಾಳ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ 75ನೇ ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಮೂರ್ತಯ್ಯಶೆಟ್ಟಿ ಕೆ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರಾದ ಶ್ರೀ ಬ್ರಹ್ಮಾನಂದ ರೆಡ್ಡಿ ಮತ್ತು ಸಹಕಾರಿಯ ಸಿಬ್ಬಂದಿ ಮತ್ತು ಸಹಕಾರಿಯ ಪಿಗ್ಮಿ ಏಜೆಂಟರು ಹಾಜರಿದ್ದರು.




**ಹೊಸಪೇಟೆ :** ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ 75ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಗದಗ :** 75ನೇ ಗಣರಾಜೋತ್ಸವದ ಧ್ವಜಾರೋಹಣಾ ಆಚರಣೆ ಸಮಾರಂಭ ಸ್ಥಳೀಯ ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ ಇದರ ವತಿಯಿಂದ ದಿನಾಂಕ 26/01/2024 ನೇಯ ಶುಕ್ರವಾರ ಮುಂಜಾನೆ 8–15 ಕ್ಕೆ ಸಹಕಾರಿಯ ಮುಂಭಾಗದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಂಕರಗೌಡ ಎಂ ಪಾಟೀಲ ಸಾ॥ ಮಲ್ಲಸಮುದ್ರ ಇವರ ಅಮೃತ ಹಸ್ತದಿಂದ ಗಣರಾಜೋತ್ಸವದ ಧ್ವಜಾರೋಹಣ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದಲ್ಲಿ ಶ್ರೀ ಶಂಕರಗೌಡ ಎಂ ಪಾಟೀಲ ಹಾಗೂ ಸಹಕಾರಿಯ ನಿರ್ದೇಶಕರಾದ ಶ್ರೀ ಅಶೋಕ ಎಸ್ ಸಂಕಣ್ಣವರ ಇವರುಗಳು 75ನೇಯ ಗಣರಾಜೋತ್ಸವದ ಧ್ವಜವನ್ನು ಹಾರಿಸಿದ ನಂತರ ಪ್ರಜಾರಾಜೋತ್ಸವದ ಬಗ್ಗೆ ನಾಲ್ಕು ಮಾತನಾಡಿದ ನಂತರ ಕಾರ್ಯಕ್ರಮವು ಮುಕ್ತಾಯವಾಯಿತು. ಸದರ ಸಭೆಯಲ್ಲಿ ಸಹಕಾರಿಯ ಮ್ಯಾನೇಜರರಾದ ಶ್ರೀ ಸಿ ವ್ಹಿ ಪಾಟೀಲ ಸಹಕಾರಿಯ ಸಿಬ್ಬಂದಿಯಾದ ಪರಪ್ಪ ವ್ಹಿ ಬಳಿಗೇರ ಮತ್ತು ಪಿಗ್ಮಿ ಸಂಗ್ರಹಕಾರರಾದ ರಮೇಶ ಪಿ ಅಣ್ಣಿಗೇರಿ ಮತ್ತು ಆಯ್ ಜೆ ಶಿರೂರು ಸಹಕಾರಿ ಸಂಘದ ಸದಸ್ಯರು ಪಾಲುಗೊಂಡು ಸಭೆಯನ್ನು ಯಶಸ್ವಿಗೊಳಿಸಿದರು.



**ಶಿವಮೊಗ್ಗ :** ದಿನಾಂಕ 22–01–2024 ರ ಸೋಮವಾರದಂದು ಅಯೋಧ್ಯೆಯಲ್ಲಿ ನಡೆಯಲಿರುವ "ಶ್ರೀ ರಾಮಲಲ್ಲಾ ಶ್ರೀ ರಾಮಚಂದ್ರನ ಪ್ರಾಣ ಪ್ರತಿಷ್ಠಾಪನೆಯ" ಪ್ರಯುಕ್ತ ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ವಿನೋಬನಗರದ ಶಾಖೆಯಲ್ಲಿ ಶ್ರೀ ರಾಮಚಂದ್ರನ ಪೂಜೆಯನ್ನು ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾರಾಯಣಮೂರ್ತಿ ಎಸ್. ಎ., ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಮಾಲತಿ ಎಂ.ಪಿ. ವ್ಯವಸ್ಥಾಪಕರಾದ ಶ್ರೀ ಈಶ್ವರಯ್ಯ ಎಸ್, ಸಿಬ್ಬಂದಿ ವರ್ಗದವರು, ಪಿಗ್ಮಿ ಸಂಗ್ರಹಕಾರರು ಹಾಗೂ ಸಹಕಾರಿಯ ಸದಸ್ಯರಾದ ಮತ್ತು ಶಿವಮೊಗ್ಗ ಕೆಂಬ್ರಿಡ್ಜ್ ಪಿ.ಯು. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಜಗದೀಶ್ ಯು.ಎನ್ ಇವರು ಉಪಸ್ಥಿತರಿದ್ದರು.



**ತುಮಕೂರು** : ದಿನಾಂಕ 01.02.2024 ರಂದು ಶ್ರೀ ರಾಮೇಶ್ವರಾಂಜನೇಯಸ್ವಾಮಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ಹಂಚಿಹಳ್ಳಿ, ತುಮಕೂರು ಈ ಸಹಕಾರಿಯ ಉದ್ಘಾಟನಾ ಸಮಾರಂಭ ಹಾಗೂ ಮೊದಲ ವರ್ಷದ ಸರ್ವಸದಸ್ಯರ ಸಭೆಯನ್ನು ಆಯೋಜಿಸಲಾಗಿತ್ತು. ಸಮಾರಂಭದಲ್ಲಿ ಪ.ಪೂ ಅಟವಿಮರಿಸ್ವಾಮಿಗಳಾದ ಶ್ರೀ ಮಲ್ಲಿಕಾರ್ಜುನ ದೇವರು ಹಾಗೂ ಪ.ಪೂ. ಶ್ರೀ ಕಾರದ ವೀರಬಸವ ಮಹಾಸ್ವಾಮಿಗಳು ದಿವ್ಯ ಸಾನಿಧ್ಯವನ್ನು ವಹಿಸಿದ್ದರು. ಸಹಕಾರ ರತ್ನ ಪುರಸ್ಕೃತರು ಹಾಗೂ ಗುರುಕುಲ ವಿವಿದೋದ್ಧೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಮತ್ತು ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಜಿ. ಮಲ್ಲಿಕಾರ್ಜುನರವರು, ಸಹಕಾರಿಯ ಮುಖ್ಯಪ್ರವರ್ತಕರಾದ ಶ್ರೀ ಲಿಂಗಪ್ಪ, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ಇವರು ಉಪಸ್ಥಿತರಿದ್ದರು.




**ಗೌರಿಬಿದನೂರು** : ದಿನಾಂಕ 18–01–2024 ರಂದು ಗೌರಿಬಿದನೂರು ನಗರದಲ್ಲಿ ಹೊಸ ಸೌಹಾರ್ದ ಸಹಕಾರಿ ಸಂಘ ಸ್ಥಾಪನೆ ಕುರಿತಂತೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್ ರವರು ಪ್ರವರ್ತಕರ ಸಭೆಯಲ್ಲಿ ಭಾಗವಹಿಸಿ ಸೌಹಾರ್ದ ಕಾಯ್ದೆ ಮತ್ತು ಸಹಕಾ–ರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.



**ಬೆಳಗಾವಿ** : ನೂತನವಾಗಿ ಅಧಿಕಾರ ವಹಿಸಿಕೊಂಡ ಲೆಕ್ಕಪರಿಶೋಧನಾ ಇಲಾಖೆಯ ಮಾನ್ಯ ಜಂಟಿ ನಿರ್ದೇಶಕರಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ, ಇವರಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು. ವರ್ಗಾವಣೆಗೊಂಡ ಮಾನ್ಯ ಜಂಟಿ ನಿರ್ದೇಶಕರಾದ ಶ್ರೀ ಹೆಚ್.ಸಿ.ಬಸವರಾಜ ಇವರನ್ನು ಸಂಯುಕ್ತ ಸಹಕಾರಿಯಿಂದ ಗೌರವಪೂರ್ವಕವಾಗಿ ಬೀಳ್ಕೊಡಲಾಯಿತು.



**ಕಲಬುರಗಿ** : ದಿನಾಂಕ 06.02.2024ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೇರಿ ವತಿಯಿಂದ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗೆ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಪ್ರಕ್ರೀಯೆಯ ಕುರಿತು ತರಬೇತಿಯನ್ನು ಪ್ರಾಂತೀಯ ಕಛೇರಿ ಕಲಬುರಗಿಯ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಸಂಜಯ ಕಪೂರರವರು ನೆರವೇರಿಸಿದರು. ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ನುಡಿದರು. ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೀರಶಟ್ಟಿ ಕೆ ಯವರು, ನಿರೂಪಣೆಯನ್ನು ಪವನ ಎಮ್ ಆರ್ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರು ನೆರವೇರಿಸಿದರು. ಕಾರ್ಯಕ್ರಮವನ್ನು ಸಹಕಾರ ಗೀತೆಯೊಂದಿಗೆ ಪ್ರಾರಂಭಿಸಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಎಸ್. ಈ ಜೋಶಿ ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರವರು (ನಿವೃತ್ತ) ದಾವಾ ದಾಖಲಾತಿ ಸಾಲ ವಸೂಲಾತಿಯ ಕುರಿತು ಉಪನ್ಯಾಸ ನೀಡಿದರು. ತರಬೇತಿಯಲ್ಲಿ 2 ಜಿಲ್ಲೆಗಳಿಂದ 84 ಸಹಕಾರಿಗಳಿಂದ 102 ಪ್ರತಿನಿಧಿಗಳು ಭಾಗವಹಿಸಿದ್ದರು.



# ಸಹಕಾರ ಸಂಸ್ಥೆಗಳ ಪದಾಧಿಕಾರಿಗಳ ಆಡಳಿತ ಮಂಡಳಿ ಸದಸ್ಯರು, ಸಹಕಾರಿ ಸದಸ್ಯರ ಸೇವಕರೇ? - ಒಂದು ವಿಮರ್ಷೆ

– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

ಲೋಕಸಭೆ, ರಾಜ್ಯ ಸಭೆ, ವಿಧಾನ ಸಭೆ ವಿಧಾನ ಪರಿಷತ್‌ಗೆ ಆಯ್ಕೆಯಾದ ಮಂತ್ರಿ ಮಂಡಳದ ಸದಸ್ಯರನ್ನು ಕಾನೂನಿನಲ್ಲಿ ಸಾರ್ವಜನಿಕ ಸೇವಕರು ಎಂದು ಅರ್ಥೈಸಲಾಗಿದೆ. ಅಂದರೆ ಅವರ ಸಾರ್ವಜನಿಕರ ಸೇವೆ ಮಾಡಲು ಆಯ್ಕೆಯಾದ ಪ್ರತಿನಿಧಿಗಳು. ಅವರ ಮೇಲೆ ಯಾರೇ ವ್ಯಕ್ತಿ ಕ್ರಿಮಿನಲ್ ಪ್ರಕರಣ ದಾಖಲಿಸಬೇಕಾದರೆ, ಸರ್ಕಾರದ/ಸಭಾಪತಿಗಳ ಪೂರ್ವಾನುಮತಿ ಪಡೆಯತಕ್ಕದ್ದೆಂದು ನಿಗದಿ ಪಡಿಸಿದೆ. ಅಂದರೆ ಜನಪ್ರತಿನಿಧಿಯಾಗಿ ಆಯ್ಕೆಯಾಗಿ ಮಂತ್ರಿ ಮಂಡಳಿದಲ್ಲಿ ಸ್ಥಾನ ಪಡೆದಿರುತ್ತಾರೊ ಅಂತಹ ವ್ಯಕ್ತಿಗಳ ಮೇಲೆ ಕ್ರಮ ಜರುಗಿಸಲು, ಸಾರ್ವಜನಿಕರು ಬಯಸಿದರೆ, ಅವರು ಸಂಬಂಧಪಟ್ಟ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿರಬೇಕು. ಉದಾಹರಣೆಗೆ, ಪೋಲೀಸ್ ಇಲಾಖೆ ಕ್ರಿಮಿನಲ್ ಪ್ರಕರಣ ದಾಖಲಿಸಿದರೆ, ಅವರ ಮೇಲೆ ನ್ಯಾಯಾಲಯದಲ್ಲಿ ಪ್ರಕರಣ ಸಲ್ಲಿಸುವಾಗ ಸರ್ಕಾರದ ಅನುಮತಿ ಪಡೆದಿರಬೇಕು. ಇದಕ್ಕೆ ಪೂರಕವಾಗಿ ಲೋಕಾಯುಕ್ತರು ಪ್ರಕರಣ ದಾಖಲಿಸಿ, ನ್ಯಾಯಾಲಯದಲ್ಲಿ ಪ್ರಕರಣ ಹೂಡುವ ಮೊದಲು ಸರ್ಕಾರದ/ಸಭಾಪತಿ/ಗೌರ್‍ನರ್‌ರ ಅನುಮತಿ ಪಡೆದಿರಬೇಕು.

**ಸಹಕಾರ ಸಂಘಗಳ ಕಾಯಿದೆಯಡಿ ಇರುವ ಅವಕಾಶ ನೋಡೋಣ. (ಸಿವಿಲ್ ಪ್ರಕರಣಗಳಲ್ಲಿ)**

"ಮಂಡಳಿ" ಎಂದರೆ, ಯಾವುದೇ ಹೆಸರಿನಿಂದ ಕರೆಯಲಾಗುವ ಯಾವ ನಿರ್ದೇಶಕರ ಮಂಡಳಿಗೆ ಅಥವಾ ಆಡಳಿತ ನಿಕಾಯಕ್ಕೆ ಸಂಘದ ವ್ಯವಹಾರಗಳನ್ನು ವ್ಯವಸ್ಥಾಪನೆಯ ನಿರ್ದೇಶನ ಮತ್ತು ನಿಯಂತ್ರಣವನ್ನು ವಹಿಸಿಕೊಡಲಾಗಿದೆಯೋ, ಆ ಸಹಕಾರ ಸಂಘದ ನಿರ್ದೇಶಕ ಮಂಡಳಿ ಅಥವಾ ಆಡಳಿತ ನಿಕಾಯ.

"ನಿರ್ದೇಶಕ" ಎಂದರೆ, ಈ ಕಾಯ್ದೆಯ ಅಡಿಯಲ್ಲಿ ಮಾಡಲಾದ, ನಿಯಮಗಳು ಮತ್ತು ಉಪವಿಧಿಗಳಿಗೆ ಅನುಸಾರವಾಗಿ ಯುಕ್ತವಾಗಿ ಆಯ್ಕೆಯಾದ ಅಥವಾ ನಾಮನಿರ್ದೇಶನವಾದ ಅಥವಾ ಸಹ – ಸದಸ್ಯನಾಗಿ ಸೇರಿಸಿ ಕೊಳ್ಳಲಾದ ಮಂಡಳಿಯ ಒಬ್ಬ ಸದಸ್ಯ.

"ಪದಾಧಿಕಾರಿ" ಎಂದರೆ, ಅಧ್ಯಕ್ಷ, ಸಭಾಪತಿ, ಉಪಸಭಾಪತಿ, ಉಪಾಧ್ಯಕ್ಷ, (ಚುನಾಯಿತ ಕಾರ್ಯದರ್ಶಿ ಅಥವಾ ಖಜಾಂಚಿ), ಸಮಾಪಕ, ಆಡಳಿತಾಧಿಕಾರಿ, ವಿಶೇಷಾಧಿಕಾರಿ ಮತ್ತು ಸಹಕಾರ ಸಂಘದ ವ್ಯವಹಾರ ಸಂಬಂಧದಲ್ಲಿ ಯಾವುದೇ ಅಧಿಕಾರವನ್ನು ಚಲಾಯಿಸಲು ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಲು ಅಧಿಕಾರ ಪಡೆದಿರುವ ನೌಕರನಲ್ಲದ ಯಾವುದೇ ಇತರ ವ್ಯಕ್ತಿ ಮತ್ತು ಸಮಿತಿ ಸದಸ್ಯ ಅಥವಾ ಸಂಘದ ವ್ಯವಹಾರಗಳಿಗೆ ಸಂಬಂಧಪಡುವ ಕಾರ್ಯನೀತಿಗಳ ಬಗ್ಗೆ ಯಾವುದೇ ನಿರ್ದೇಶನಗಳನ್ನು ನೀಡಲು ಅಧಿಕಾರ ನೀಡಲಾದ ಯಾವುದೇ ಇತರ ವ್ಯಕ್ತಿಯನ್ನು ಒಳಗೊಂಡಿರುತ್ತದೆ.

ಈ ಮೇಲ್ಕಂಡ ಅರ್ಥ ವಿವರಣೆಯಲ್ಲಿ ಮಂಡಳಿ ನಿರ್ದೇಶಕ ಮತ್ತು ಪದಾಧಿಕಾರಿ ಎಂಬ ಪದಗಳಿಗೆ ಅರ್ಥ ವಿವರಣೆ ನೀಡಲಾಗಿದೆ ಹಾಗೂ ಆಯ್ಕೆಯಾದ ವ್ಯಕ್ತಿ ಸಹಕಾರಿ ಸಂಘಗಳ ಮುನ್ನಡೆಸಲು ಅಧಿಕಾರ ಹೊಂದಿದ್ದಾನೆ. ಅಂದರೆ ಸಹಕಾರ ಸಂಘವನ್ನು ಮುನ್ನಡೆಸಲು ಸದಸ್ಯರೇ ಆಯ್ಕೆ ಮಾಡಿದ ವ್ಯಕ್ತಿಗಳು ಸಹಕಾರಿ ಕಾನೂನು, ನಿಯಮ ಮತ್ತು ಸಂಘದ ಉಪನಿಯಮಗಳಲ್ಲಿ ನಿಗದಿ ಪಡಿಸಿದ ಜವಾಬ್ದಾರಿಗಳನ್ನು ನಿರ್ವಹಿಸಬೇಕು, ಹಾಗೂ ಆ ಕೆಲಸ ಮಾಡಲು ನಿರ್ಲಕ್ಷ ತೋರಿಸಿದರೆ ಮತ್ತು ಅವ್ಯವಹಾರ ಮಾಡಿದರೆ – ಅದಕ್ಕೆ ಅವರು ಜವಾಬ್ದಾರರಾಗುತ್ತಾರೆ. ಇದಕ್ಕೆ ಚ್ಯುತಿ ಮಾಡಿದ ಮಂಡಳಿ ಸದಸ್ಯರನ್ನು ಕಾಯಿದೆ ಕಲಂ.29ಸಿ ಅಡಿ

ಕಲಂ.29ಸಿ(1) – ಒಬ್ಬ ವ್ಯಕ್ತಿಯು ಈ ಮುಂದಿನ ಅನರ್ಹತೆಗಳಿಗೊಳಗಾಗಿದ್ದರೆ, ಯಾವುದೇ ಒಂದು ಸಹಕಾರ ಸಂಘದ ಸಮಿತಿ ಸದಸ್ಯನಾಗಿ ಚುನಾಯಿತ ನಾಗುವುದಕ್ಕಾಗಲೀ ಅಥವಾ ನೇಮಕವಾಗುವುದಕ್ಕಾಗಲೀ ಅಥವಾ ಮುಂದುವರಿಯುವುದಕ್ಕಾಗಲೀ ಅನರ್ಹನಾಗತಕ್ಕದ್ದು.

(ಎಚ್) ಅವನು ಸಂಘದ ಸದಸ್ಯನಾಗಿರುವುದಕ್ಕೆ ಅಥವಾ ಅಂತಹ ಸದಸ್ಯನಾಗಿ ಮತ ಚಲಾಯಿಸಲು ಅನರ್ಹಗೊಳಿಸಿದ್ದರೆ;

(ಐ) ಅವನು ಭಾರತ ದಂಡ ಸಂಹಿತೆ 1860 (1860ರ ಕೇಂದ್ರ ಕಾಯ್ದೆ 45ರ ಕಲಂ.153ಎ ಅಥವಾ ಕಲಂ.171ಇ ಅಥವಾ 171ಎಫ್ ಅಥವಾ ಕಲಂ505ರ ಉಪಕಲಂ (2) ಅಥವಾ (3) ನೇ ಉಪಕಲಂ, ಅಥವಾ ಈ ಕಾಯ್ದೆಯ ಕಲಂ.39ಜೆ ಅಥವಾ ಕಲಂ.39ಕೆ ಉಪಕಲಂ.(2)ರ ಖಂಡ (ಬಿ) ಮೇರೆಗೆ ದಂಡನೀಯವಾದ ಒಂದು ಅಪರಾಧಕ್ಕಾಗಿ ಸಿದ್ದ ದೋಷಿಯಾಗಿದ್ದು ಅಂತಹ ದೋಷಸಿದ್ಧಿಯಾದ ದಿನಾಂಕದಿಂದ ಆರು ವರ್ಷಗಳ ಅವಧಿ ಕಳೆಯದ ಹೊರತು;

(ಜೆ) ಅವನು ಯಾವುದೇ ಅಪರಾಧಕ್ಕಾಗಿ ಭಾರತದಲ್ಲಿನ ಒಂದು ನ್ಯಾಯಾಲಯದಿಂದ ಶಿಕ್ಷೆಗೊಳಗಾಗಿದ್ದಲ್ಲಿ ಮತ್ತು ಎರಡು ವರ್ಷಗಳಿಗೆ ಕಡಿಮೆಯಿಲ್ಲದ ಅವಧಿಗೆ ಕಾರಾಗೃಹವಾಸದ ಶಿಕ್ಷೆಗೆ ಗುರಿಯಾಗಿದ್ದು, ಅವನ ಬಿಡುಗಡೆಯ ದಿನಾಂಕದಿಂದ ಐದು ವರ್ಷಗಳ ಅವಧಿ ಕಳೆಯದ ಹೊರತು;

(ಕೆ) ಅವನು ಈ ಕಾಯ್ದೆಯ ಕಲಂ.39ಸಿ ಅರ್ಥ ವ್ಯಾಪ್ತಿಯೊಳಗೆ ಅವನು ಭ್ರಷ್ಟಚಾರದ ದೋಷಿಯಾಗಿದ್ದು ಆ ಅಪರಾಧ ದೋಷಿಯಾದ ದಿನಾಂಕದಿಂದ ಆರು ವರ್ಷಗಳ ಅವಧಿ ಕಳೆಯದ ಹೊರತು;

ನಿಬಂಧಕರು ಅನರ್ಹತೆಗೊಳ ಪಡಿಸುವುದರ ಜೊತೆ, ಮಂಡಳಿ ಸದಸ್ಯರೆಲ್ಲರೂ ಭಾಗಿಯಾಗಿದ್ದರೆ ಅದರ ಮೇಲೆ ಕಲಂ.30 ರಡಿ ಮಂಡಳಿ ರದ್ದು ಪಡಿಸಿ ಆಡಳಿತಾಧಿಕಾರಿ ನೇಮಿಸುವ ಅಧಿಕಾರವನ್ನು ನಿಬಂಧಕರಿಗೆ ನೀಡಲಾಗಿದೆ. ಈ ಎಲ್ಲಾ ಕ್ರಮಗಳು ಸಿವಿಲ್ ಕ್ರಮಗಳು.

ಇದರ ಜೊತೆಗೆ ಸಹಕಾರ ಸಂಘದ ಅಥವಾ ಅಧಿಕಾರಿಗಳ ಮೇಲೆ ದಾವಾ ದಾಖಲಿಸುವ ಪೂರ್ವದಲ್ಲಿ 1959ರ ಕಾಯಿದೆ ಕಲಂ.125 ರಡಿ 60 ದಿವಸಗಳ ನೋಟೀಸ್ ನೀಡಲು ಅವಕಾಶ ಕಲ್ಪಿಸಿದೆ.

ಕಲಂ.125 – ಯಾವ ದಾವೆಯನ್ನೇ ಆಗಲಿ ಒಂದು ಸಹಕಾರ ಸಂಘದ ಮೇಲೆ ಅಥವಾ ಆ ಸಂಘದ ಅಂಗ ರಚನೆ, ಆಡಳಿತ ಅಥವಾ ವ್ಯವಹಾರ – ಇವುಗಳಿಗೆ ಸಂಬಂಧಿಸಿದ ಯಾವುದೇ ಕಾರ್ಯದ ಸಂಬಂಧ – ಆ ವ್ಯಾಜ್ಯದ ಕಾರಣ, ವಾದಿಯ ಹೆಸರು, ಹಾಗೂ ಅವನ ವಾಸಸ್ಥಳದ ವಿವರಗಳನ್ನು ಮತ್ತು ಅವನು ಹಕ್ಕು ಸಾಧಿಸಿ ಕೇಳುತ್ತಿರುವ ಪರಿಹಾರ ಇವೆಲ್ಲವುಗಳನ್ನು ನಮೂದಿಸಿ ಲಿಖಿತ ನೋಟೀಸನ್ನು ನಿಬಂಧಕರಿಗೆ ಅಥವಾ ಅವರ ಕಛೇರಿಗೆ ತಲುಪಿಸಿದ ನಂತರ, ಎರಡು ತಿಂಗಳು ಗತಿಸದ ಹೊರತು, ಸಂಘದ ಅಥವಾ ಯಾರೇ ಅಧಿಕಾರಿ ವಿರುದ್ಧ ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ. ಮತ್ತು ಅಂತಹ ನೋಟೀಸನ್ನು ಹಾಗೆ ಕೊಟ್ಟಿರುವುದಾಗಿ ಅಥವಾ ತಲುಪಿಸಿರುವುದಾಗಿ ನಮೂದಿಸುವ ಒಂದು ವಿವರಣೆಯನ್ನು ಆ ವಾದ ಪತ್ರವು ಒಳಗೊಂಡಿರುತಕ್ಕದ್ದು.

ಈ ಮೇಲ್ಕಂಡ ನಿಗದಿ ಪಡಿಸಿದಂತೆ ನೋಟೀಸ್ ನೀಡದಿದ್ದರೆ, ಅಂತಹ ದಾವೆ ಊರ್ಜಿತವಾಗುವುದಿಲ್ಲ. ಈ ಮೇಲ್ಕಂಡ ಎಲ್ಲಾ ಅವಕಾಶಗಳು ಒಂದು ಸಹಕಾರ ಸಂಘದ, ಅದರ ನಿರ್ದೇಶಕರು ಮತ್ತು ಅಧಿಕಾರಿಗಳ ಮೇಲೆ ತೆಗೆದುಕೊಳ್ಳಬಹುದಾದ ಅವಕಾಶಗಳು ಈ ಎಲ್ಲಾ ವ್ಯಕ್ತಿಗಳನ್ನು "ಅಧಿಕಾರಿಗಳು" ಎಂದು ತೀರ್ಮಾನಿಸಬಹುದೇ? ಸಹಕಾರ ಕಾಯಿದೆಯಲ್ಲಿ ಮಂಡಳಿ ರಚನೆ ಮಾಡಿ ಅಧಿಕಾರ ಸ್ವೀಕರಿಸಿದಾಗ ಅವರು ಆ ಸಹಕಾರಿ/ಸಂಘದ ಸದಸ್ಯರ ಸೇವೆ ಮಾಡಲು ಆಯ್ಕೆಯಾಗಿರುವುದರಿಂದ ಅವರನ್ನು ಅಧಿಕಾರಿಗಳು ಎಂದು ನಿರ್ಧರಿಸಬಹುದು ಮತ್ತು ಅವರು ಸದಸ್ಯರಿಗೆ ಸೇವೆ ನೀಡಲು ನೇಮಕವಾದ ವ್ಯಕ್ತಿಗಳಾದ್ದರಿಂದ, ಆ ನಿರ್ದೇಶಕರ ಆಯ್ಕೆ ಬಗ್ಗೆ ಸಹಕಾರಿ/ಸಂಘದ ಸದಸ್ಯರು ದಾವೆ ಹೂಡಬಹುದು.

ಸಹಕಾರಿ ಕಾಯಿದೆ ಕಲಂ.28ಸಿ ಅಡಿ ಮಂಡಳಿಗೆ ಅಧಿಕಾರ ಮತ್ತು ಕರ್ತವ್ಯಗಳನ್ನು ನಿಗದಿ ಪಡಿಸಿದೆ. ಇದೇ ರೀತಿ ಸಚಿವರಿಗೂ ವ್ಯವಹಾರಿಕ ನಿಯಮಗಳನ್ನು ವಿಧಾನ ಮಂಡಳ ರೂಪಿಸಿದೆ ಮತ್ತು ಮಂತ್ರಿತ್ವ ವಹಿಸಿಕೊಳ್ಳುವಾಗ ಸಂವಿಧಾನದಡಿ ಪ್ರಮಾಣ ವಚನ ಸ್ವೀಕರಿಸಿ, ಸಂವಿಧಾನಕ್ಕೆ ಬದ್ಧನಾಗಿರುವುದಾಗಿ ಪ್ರಮಾಣೀಕರಿಸಬೇಕು.

ಆದರೆ ಪ್ರಮಾಣ ವಚನ ಸ್ವೀಕರಿಸುವ ಭದ್ದತೆ ಸಹಕಾರ ಕಾಯಿದೆಯಲ್ಲಿ ನಿಗದಿ ಪಡಿಸಿಲ್ಲ. ಆದರೆ ಹಲವು ಸಹಕಾರ ಸಂಸ್ಥೆಗಳ ಆಯ್ಕೆಯಾದ ಮಂಡಳಿ ಸದಸ್ಯರಿಗೆ ಪ್ರಮಾಣ ವಚನ ನಿಗದಿ ಪಡಿಸಿ – ಅದನ್ನು ಅಧಿಕಾರ ಗ್ರಹಣ ಮಾಡುವಾಗ ಸ್ವೀಕರಿಸುವಂತೆ ವ್ಯವಸ್ಥೆ ಮಾಡುತ್ತಾರೆ. ಅಂದರೆ ಸದಸ್ಯರ ಹಿತಾಸಕ್ತಿ ಕಾಪಾಡಲು ನೇಮಕವಾದ ನಿರ್ದೇಶಕರ/ಪದಾಧಿಕಾರಿಗಳು, ಆ ಬದ್ದತೆ ತೋರಿಸದಿದ್ದರೆ, ಅಂದರೆ ಆಯ್ಕೆಯಾದ ವ್ಯಕ್ತಿ ಅರ್ಹತೆ ಮತ್ತು ಅನರ್ಹತೆ ಬಗ್ಗೆ ಮತದಾನದ ಸಮಯದಲ್ಲಿ, ಆಯ್ಕೆಯಾದ ನಂತರ ವಿಮರ್ಷಿಸುವ ಅಧಿಕಾರ ಸದಸ್ಯರಿಗೆ ಇದೆ.

ಮಂಡಳಿ ಸದಸ್ಯರ ಆಯ್ಕೆ ಸಮಯದಲ್ಲಿ ಆ ವ್ಯಕ್ತಿಗಳ ಗುಣಾ ಅವಗುಣಗಳ ಬಗ್ಗೆ ಪೂರ್ಣ ತಿಳುವಳಿಕೆ ಇಲ್ಲದೇ ಇದ್ದಾಗ, ಅಂತಹ ವ್ಯಕ್ತಿಗಳು ಆಯ್ಕೆಯಾದ ನಂತರ ಸುಳ್ಳು, ತಪ್ಪು ಮಾಹಿತಿ ನೀಡಿ ಮತದಾರರಿಗೆ ಅನ್ಯಾಯವಾಗಿದ್ದರೆ, ಅದನ್ನು ಪ್ರಶ್ನಿಸುವ ಹಕ್ಕು ಇರತಕ್ಕದ್ದು ಮತ್ತು ಇದೆ.

ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ ಕಲಂ.23(3)(ಎಲ್) ಅಡಿ ಮಂಡಳಿಯ ನಿರ್ದೇಶಕರನ್ನು ತೆಗೆದು ಹಾಕುವ ಅವಕಾಶ ಕಲ್ಪಿಸಿದ್ದರೂ, ಅದು ಚುನಾವಣೆಗೆ ಸಂಬಂಧಪಟ್ಟ ಅವಕಾಶ ಅಲ್ಲದೇ ಇರುವುದರಿಂದ ಹಾಗೂ, ಈ ಅವಕಾಶ ಉಪಯೋಗಿಸಿದರೆ ಅದನ್ನು ವಾರ್ಷಿಕ ಸಾಮಾನ್ಯ ಸಭೆಗೆ ಚರ್ಚಿಸುವ ಪೂರ್ವದಲ್ಲಿ ಸದಸ್ಯರು ಅಂತಹ ನಿರ್ದೇಶಕನ ತೆಗೆದು ಹಾಕುವ ಬಗ್ಗೆ ವಿಷಯ ಲಿಖಿತವಾಗಿ ಪ್ರಸ್ತಾಪಿಸಿ, ಮಂಡಳಿ ಮೂಲಕ ಸಾಮಾನ್ಯ ಸಭೆಯಲ್ಲಿ ವಿಷಯ ಮಂಡಿಸಿ, ಬಹುಮತದಿಂದ ತೆಗೆದುಹಾಕಬಹುದಾದರೂ, ಅದನ್ನು ಚುನಾವಣೆಯಲ್ಲಿ ಆಯ್ಕೆಯಾದ ಪ್ರಕ್ರಿಯೆಗೆ ಸಂಬಂಧಪಡುವುದಿಲ್ಲ. ಆದ್ದರಿಂದ ಪ್ರತಿಯೊಬ್ಬ ಸಹಕಾರಿ/ಸಂಘದ ಸದಸ್ಯನಿಗೆ ಚುನಾವಣೆ ನಡೆದ ಸಂದರ್ಭದಲ್ಲಿ ಪ್ರಶ್ನಿಸಿದಂತಾಗುವುದಿಲ್ಲ.

### ಚುನಾವಣೆಯಲ್ಲಿ ಸದಸ್ಯನ ಹಕ್ಕುಗಳೇನು?

ಸಹಕಾರಿ/ಸಂಘ ಅರ್ಹ ಮತದಾರರ ಪಟ್ಟಿ ತಯಾರು ಮಾಡುವಾಗ, ಉಪವಿಧಿಗಳಲ್ಲಿ ನಿಗದಿ ಪಡಿಸಿದ ಅರ್ಹತೆ ಆಧಾರದಲ್ಲಿ ಪಟ್ಟಿ ತಯಾರಿಸಲಾಗುತ್ತಿದೆ. ಈ ಪಟ್ಟಿಯಲ್ಲಿ ಸೇರಿಸಿದ ವ್ಯಕ್ತಿಗಳು ಮಾತ್ರ ಮತ ಚಲಾಯಿಸಲು ಅರ್ಹತೆ ಪಡೆಯುತ್ತಾರೆ ಹಾಗೂ ಆ ಅರ್ಹ ಪಟ್ಟಿಯಲ್ಲಿ ಹೆಸರಿದ್ದರೆ ಮಾತ್ರ ಆ ಸಹಕಾರಿ/ಸಂಘದ ಸದಸ್ಯ ಮತ ಚಲಾಯಿಸುವುದರ ಜೊತೆಗೆ ಮಂಡಳಿ ಸದಸ್ಯತನಕ್ಕೆ ಸ್ಪರ್ಧಿಸಲು ಅರ್ಹತೆ ಪಡೆಯುತ್ತಾನೆ. ಅಂತಹ ಅರ್ಹಸದಸ್ಯನು ಮಾತ್ರ ಮಂಡಳಿ ಸದಸ್ಯನಾಗಬಹುದು. ಅಂದರೆ ಮತ ನೀಡುವ ಸದಸ್ಯ ಆಯ್ಕೆಯಾದ ಸದಸ್ಯನ ಸಮರ್ಥತೆ ಬಗ್ಗೆ ಪ್ರಶ್ನಿಸುವ ಅಧಿಕಾರ ಹೊಂದಿದ್ದಾನೆ. 1959ರ ಕಾಯಿದೆ ಕಲಂ.70ರಲ್ಲಿ ಒಂದು ಸಹಕಾರ ಸಂಸ್ಥೆಯ ರಚನೆ, ಆಡಳಿತ ಮತ್ತು ವ್ಯವಹಾರಕ್ಕೆ ಸಂಬಂಧಪಟ್ಟಂತೆ ವಿವಾದಗಳನ್ನು ನಿಬಂಧಕರು ನಿರ್ವಹಿಸಲು ಅವಕಾಶ ಕಲ್ಪಿಸಿದೆ. "ರಚನೆ" ಎಂಬ ಪದಕ್ಕೆ ಉಪಕಲಂ.(1)(ಬಿ) ಅಡಿ ಒಬ್ಬ ಸದಸ್ಯ ಯಾರ ಮೇಲೆ ದಾವಾ ದಾಖಲಿಸಬಹುದೆಂದು ಸೂಚಿಸುತ್ತದೆ. ಅದರಲ್ಲಿ ಸಂಘದ ಸಮಿತಿ ರಚನೆಯನ್ನು ಸೇರಿಸಿದೆ. ಹಾಗೂ ಕಲಂ.70(2)(ಸಿ) ಯಾವ ವಿಷಯದ ಬಗ್ಗೆ ಈ ಕೆಳಕಂಡಂತೆ ಉಲ್ಲೇಖಿಸಿದೆ.

"ಸಂಘದ ಅಧ್ಯಕ್ಷ, ಉಪಾಧ್ಯಕ್ಷ, ಅಥವಾ ಸಭಾಪತಿ, ಉಪಸಭಾಪತಿ, ಕಾರ್ಯದರ್ಶಿ, ಖಜಾಂಚಿ ಅಥವಾ ಸಮಿತಿ ಸದಸ್ಯನ ಚುನಾವಣೆ ಸಂದರ್ಭದಲ್ಲಿ ಉದ್ಭವಿಸಬಹುದಾದ ಯಾವುದೇ ವಿವಾದ".

ಅಂದರೆ ಒಂದು ಸಂಘದ ಚುನಾವಣೆ ನಡೆದು ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು – ಅಥವಾ ಸಮಿತಿ ಸದಸ್ಯನ ಚುನಾವಣೆಯ ಸಂಬಂಧದಲ್ಲಿ ಉದ್ಭವಿಸುವ ಯಾವುದೇ ವಿವಾದವನ್ನು ನಿಬಂಧಕರ ತೀರ್ಪಿಗಾಗಿ ಕಳುಹಿಸಬೇಕು. ಏಕೆಂದರೆ ಅದು ಸಹಕಾರಿಯ/ಸಂಘದ ಆಡಳಿತಕ್ಕೆ ಸಂಬಂಧಪಟ್ಟ ವಿಷಯ.

ಈ ಹಿಂದೆ ಪ್ರಸ್ತಾಪಿಸಿದಂತೆ ಲೋಕಸಭೆ ವಿಧಾನ ಸಭಾ ಸದಸ್ಯರು ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವಾಗ ಅವರು ಸಂವಿಧಾನಕ್ಕೆ ಭದ್ದತೆ ಬಗ್ಗೆ ಪ್ರಮಾಣ ವಚನ ಸ್ವೀಕರಿಸುತ್ತಾರೆ ಮತ್ತು ಅವರನ್ನು ಪ್ರಜೇಗಳ ಸೇವಕರೆಂದು ಪರಿಗಣಿಸಲಾಗಿದೆ. ಸಹಕಾರ/ಸಂಘದ ಚುನಾವಣೆ ಮುಖಾಂತರ ಆಯ್ಕೆಯಾದ ಮಂಡಳಿ ಸದಸ್ಯರು ಕಾಯಿದೆ, ನಿಯಮ ಮತ್ತು ಉಪನಿಯಮಗಳಿಗಳಂತೆ ಕಾರ್ಯನಿರ್ವಹಿಸಬೇಕು. ಆಯ್ಕೆಯಾದ ವ್ಯಕ್ತಿಗಳು ಸದಸ್ಯರ ಹಿತಾಸಕ್ತಿ ಕಾಪಾಡಲು ಶಕ್ತರಲ್ಲ ಅಥವಾ ಅನರ್ಹರೆಂದು ಮತಚಲಾಯಿಸಿದ ಸದಸ್ಯನಿಗೆ ಅಂತಹ ಆಯ್ಕೆಯಾದ ವ್ಯಕ್ತಿಗಳ ಆಯ್ಕೆ ಸಿಂದುತ್ವ ಪ್ರಶ್ನಿಸುವ ಅಧಿಕಾರ ಇರಬೇಕು ಮತ್ತು ಇರುತ್ತದೆ. ಈ ವ್ಯಾಪ್ತಿಯಿಂದ ಅಂತಹ ಮಂಡಳಿ ಸದಸ್ಯರು ಸಾರ್ವಜನಿಕ ಸೇವಕರಲ್ಲದೆ ಇದ್ದರೂ, ಆ ಸಂಘದ ಸದಸ್ಯರಿಗೆ, ಆ ಸಂಘದ ದೇಯೋದ್ದೇಶಗಳನ್ನು ಪೂರೈಸಲು ಆಯ್ಕೆಯಾದ ಮಂಡಳಿ ಸದಸ್ಯರು ಸೇವಕರೇ.

## 2023ರ ಸಹಕಾರ ಸಪ್ತಾಹದ ಸಂದರ್ಭದಲ್ಲಿ ಪುರಸ್ಕೃತ ಪ್ರಬಂಧ

# ಸಹಕಾರ ಸಂಸ್ಥೆಗಳನ್ನು ಡಿಜಿಟಲೀಕರಣಗೊಳಿಸಲು ತಾಂತ್ರಿಕತೆಯ ಅಳವಡಿಕೆ ಮತ್ತು ಉನ್ನತೀಕರಣ :

– ಶ್ರೀ ಸತ್ಯಂ ಭಟ್, ಕದಂಬ ಸೌಹಾರ್ದ ಸಹಕಾರಿ ಸಂಘ ನಿಯಮಿತ

**ಪೀಠಿಕೆ :**

ಇಂದಿನ ಆಧುನಿಕ ಜಗತ್ತು ಮುಂದುವರಿಯುತ್ತಿರುವ ಓಘವನ್ನು ನೋಡಿದರೆ ಪ್ರತಿಯೊಂದು ಕ್ಷೇತ್ರದಲ್ಲೂ "ಡಿಜಿಟಲೀಕರಣ ಮತ್ತು ತಾಂತ್ರಿಕತೆ ಅನಿವಾರ್ಯ" ಎಂದರೆ ಅತಿಶಯೋಕ್ತಿಯಲ್ಲ. ನಮ್ಮ ದೇಶದ ಹೆಮ್ಮೆಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಕನಸಿನ ಕೂಸು "DIGITAL INDIA" ಸಾಕಾರಗೊಳ್ಳಬೇಕು ಅಂದರೆ ಎಲ್ಲ ಕ್ಷೇತ್ರದಲ್ಲಿಯೂ ನವನವೀನ ಉತ್ಕೃಷ್ಟವಾದ ತಾಂತ್ರಿಕತೆ ಅಳವಡಿಸಿಕೊಳ್ಳಲೇಬೇಕು. ಅಂದಾಗ ಮಾತ್ರ ನಮ್ಮ ದೇಶ ಜಗತ್ತಿಗೆ ತಾಂತ್ರಿಕತೆಯಲ್ಲಿ ಕೊಡುಗೆಯನ್ನು ಕೊಡಲು ಸಾಧ್ಯ. ಮತ್ತು ಜಗತ್ತು ಭಾರತದಂತಹ ಮುಂದುವರೆಯುತ್ತಿರುವ ರಾಷ್ಟ್ರದಿಂದ ಬಯಸುವುದು ಅದನ್ನೇ , ಡಿಜಿಟಲ್ ಕ್ರಾಂತಿಯು ಉತ್ತಮ ನಾಳೆಯ ಅಭಿವೃದ್ಧಿಗೆ ಸಂಬಂಧಿಸಿದೆ. ಈ ಬದಲಾವಣೆಯು ವಿಭಿನ್ನ ಸಮಾಜಗಳು, ಆರ್ಥಿಕತೆಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಮಾನವೀಯತೆಯ ಮೇಲೆ ವಿಭಿನ್ನ ರೀತಿಯಲ್ಲಿ ಪ್ರಭಾವ ಬೀರಬಹುದು. 2014 ರಿಂದ ಭಾರತ ಸರ್ಕಾರವು ವಿವಿಧ ಕ್ರಮಗಳ ಮೂಲಕ ಡಿಜಿಟಲೀಕರಣವನ್ನು ತರುವಲ್ಲಿ ಸಕ್ರಿಯವಾಗಿ ಭಾಗವಹಿಸಿದೆ. ಅಂತಹ ಒಂದು ಉದಾಹರಣೆಯೆಂದರೆ ನೋಟು ಅಮಾನ್ಯೀಕರಣ, ಇದು ಜಾಗತಿಕ ಗಮನವನ್ನು ಗಳಿಸಿದೆ ಮತ್ತು ಅಲ್ಪಾವಧಿಯ ಉದ್ಯೋಗ ನಷ್ಟಗಳು ಮತ್ತು ಆರ್ಥಿಕ ಕುಸಿತಗಳೊಂದಿಗೆ ಸಂಬಂಧ ಹೊಂದಿದೆ. ಆದಾಗ್ಯೂ, ಇದು ಭಾರತದ ಡಿಜಿಟಲ್ ರೂಪಾಂತರವನ್ನು ಹೆಚ್ಚಿಸಲು ಸರ್ಕಾರದ ನಾಯಕತ್ವದ ಅನುಸರಣೆಯನ್ನು ತೋರಿಸುತ್ತದೆ.

ಭಾರತದಲ್ಲಿ, ಸಹಕಾರಿ ಕ್ಷೇತ್ರವು ಬ್ಯಾಂಕಿಂಗ್ ಪರಿಸರ ವ್ಯವಸ್ಥೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಮೇ 31, 2023 ರ ಹೊತ್ತಿಗೆ 1,531 ನಗರ ಸಹಕಾರಿ ಬ್ಯಾಂಕ್‌ಗಳು ಮತ್ತು 97,006 ಗ್ರಾಮೀಣ ಸಹಕಾರಿ ಬ್ಯಾಂಕ್‌ಗಳಿವೆ. ಮೇಲಾಗಿ, ಈ ಬ್ಯಾಂಕ್‌ಗಳ ಒಟ್ಟಾರೆ ಠೇವಣಿದಾರರ ಸಂಖ್ಯೆ ಎಂಟು ಕೋಟಿಗಳನ್ನು ಮೀರಿದೆ. ಅಂತಹ ಮಹತ್ವದ ಕೊಡುಗೆಯೊಂದಿಗೆ, ಈ ಬ್ಯಾಂಕುಗಳ ಸಂಪೂರ್ಣ ಡಿಜಿಟಲ್ ರೂಪಾಂತರವು ಅವುಗಳನ್ನು ಭವಿಷ್ಯಕ್ಕೆ-ಸಿದ್ಧಪಡಿಸಲು ಅವಶ್ಯಕವಾಗಿದೆ. ವಿಶೇಷವಾಗಿ ಸಾಂಕ್ರಾಮಿಕ ರೋಗದ ಆಗಮನದ ನಂತರ, ಸಹಕಾರಿ ಬ್ಯಾಂಕುಗಳ ಡಿಜಿಟಲ್ ರೂಪಾಂತರವು ಅತ್ಯಗತ್ಯವಾಗಿದೆ. ಸಹಕಾರಿ ವಲಯದಲ್ಲಿ ತಾಂತ್ರಿಕ ಪ್ರಗತಿಗಳು ಈಗಾಗಲೇ ಪ್ರಾರಂಭವಾಗಿದ್ದರೂ, ಹೈಟೆಕ್ ವಾಣಿಜ್ಯ ಬ್ಯಾಂಕ್‌ಗಳೊಂದಿಗೆ ಇನ್ನೂ ಹೆಚ್ಚಿನದನ್ನು ಹಿಡಿಯಬೇಕಾಗಿದೆ.

ಸಹಕಾರಿ ಸಂಸ್ಥೆಗಳಿಗೆ ಡಿಜಿಟಲೀಕರಣ ಅನಿವಾರ್ಯವೇ ? ಎಂಬ ಯಕ್ಷಪ್ರಶ್ನೆ ಮನುಜರಿಗೆ ಕಾಡುವುದಂತೂ ಸುಳ್ಳಲ್ಲ , ಕೂಲಂಕುಶವಾಗಿ ಯೋಚಿಸಿದರೆ ಸಹಕಾರಿ ಸಂಸ್ಥೆಗಳಿಗೆ ಡಿಜಿಟಲೀಕರಣ ಅನಿವಾರ್ಯ. ಸಹಕಾರಿ ಸಂಸ್ಥೆಗಳೆಂದರೆ ಮೂಗುಮುರಿಯುವ ಜನರ ಸಂದೇಹಗಳನ್ನು ಉಪಶಮನ ಗೊಳಿಸಲು ಹಾಗೂ ಇತರ ಸರ್ಕಾರಿ ಮತ್ತು ಸರ್ಕಾರೇತರ ಹಣಕಾಸು ಸಂಸ್ಥೆಗಳ ಪೈಪೋಟಿಯನ್ನು ಮೆಟ್ಟಿ ನಿಲ್ಲಲು ಡಿಜಿಟಲೀಕರಣದ ಮೊರೆಹೋಗಬೇಕಾಗಿದೆ . ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಸಹಕಾರಿ ಸಂಸ್ಥೆಗಳಲ್ಲೇ ತಮ್ಮ ದಿನನಿತ್ಯದ ವ್ಯವಹಾರವನ್ನು ಮುಗಿಸಿ ರಾಷ್ಟ್ರೀಕೃತ ಬ್ಯಾಂಕುಗಳ ಕಡೆ ಸುಳಿಯದ ಅನೇಕ ಜನರಿದ್ದಾರೆ . ಅಂತಹ ಕಡೆ ಡಿಜಿಟಲೀಕರಣ ಸ್ವಲ್ಪ ಕಷ್ಟವಾದರೂ ಅಚ್ಚರಿ ಇಲ್ಲ.

ಮಿನಿಸ್ಟರಿ ಆಫ್ ಕೋಆಪರೇಶನ್ (ministry of cooperation) 5 ಏಪ್ರಿಲ್ 2023 ಹೇಳಿಕೆ ಪ್ರಕಾರ ದೇಶದಾದ್ಯಂತ 63,000 ಕ್ರಿಯಾತ್ಮಕ PACS/LAMPS ಗಳ ಗಣಕೀಕರಣಕ್ಕಾಗಿ ಕೇಂದ್ರ ಪ್ರಾಯೋಜಿತ ಯೋಜನೆಯು ಒಟ್ಟು ರೂ. 2,516 ಕೋಟಿ ಅನುಷ್ಠಾನ ಹಂತದಲ್ಲಿದೆ. ಯೋಜನೆಯು ಎಲ್ಲಾ ಕ್ರಿಯಾತ್ಮಕ PACS ಗಳನ್ನು ERP (ಎಂಟರ್‌ಪ್ರೈಸ್ ರಿಸೋರ್ಸ್ ಪ್ಲಾನಿಂಗ್) ಆಧಾರಿತ ಸಾಮಾನ್ಯ ಸಾಫ್ಟ್‌ವೇರ್‌ನಲ್ಲಿ ತರುತ್ತದೆ, ಅವುಗಳನ್ನು ರಾಜ್ಯ ಸಹಕಾರಿ ಬ್ಯಾಂಕ್‌ಗಳು (StCBs) ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳು (DCCBs) ಮೂಲಕ ನಬಾರ್ಡ್‌ನೊಂದಿಗೆ ಲಿಂಕ್ ಮಾಡುತ್ತದೆ..

ಪ್ರಸ್ತುತ, 24 ರಾಜ್ಯಗಳು ಮತ್ತು 4 ಕೇಂದ್ರಾಡಳಿತ ಪ್ರದೇಶಗಳಿಂದ 58,383 PACS ಗಳ ಗಣಕೀಕರಣದ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿದೆ. ಹಾರ್ಡ್‌ವೇರ್ ಸಂಗ್ರಹಣೆ, ಪರಂಪರೆಯ ದತ್ತಾಂಶದ ಡಿಜಿಟಲೀಕರಣ ಮತ್ತು ಬೆಂಬಲ ವ್ಯವಸ್ಥೆಯನ್ನು ಸ್ಥಾಪಿಸಲು ರಾಜ್ಯಗಳು/UTಗಳಿಗೆ ಕೇಂದ್ರ ಪಾಲನ್ನು ಬಿಡುಗಡೆ ಮಾಡುವುದು ಪ್ರಕ್ರಿಯೆಯಲ್ಲಿದೆ. 1,539 PACS ಗಳ ಗಣಕೀಕರಣಕ್ಕಾಗಿ ಈ ಯೋಜನೆಯಡಿಯಲ್ಲಿ ಉತ್ತರ ಪ್ರದೇಶ ರಾಜ್ಯಕ್ಕೆ 11.28 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ನಬಾರ್ಡ್‌ನಿಂದ ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಪ್ರಾಜೆಕ್ಟ್ ಮಾನಿಟರಿಂಗ್ ಯೂನಿಟ್‌ಗಳನ್ನು (ಪಿಎಂಯು) ಸ್ಥಾಪಿಸಲಾಗಿದೆ. ನಬಾರ್ಡ್‌ನಿಂದ ಆಯ್ಕೆಯಾದ ರಾಷ್ಟ್ರೀಯ ಮಟ್ಟದ ಪ್ರಾಜೆಕ್ಟ್ ಸಾಫ್ಟ್‌ವೇರ್ ವೆಂಡರ್ (NLPSV) ನಿಂದ ಸಾಫ್ಟ್‌ವೇರ್ ಅಭಿವೃದ್ಧಿಯನ್ನು ಪ್ರಾರಂಭಿಸಲಾಗಿದೆ.

PACS ಯೋಜನೆಯ ಗಣಕೀಕರಣದ ನಿರೀಕ್ಷಿತ ಪ್ರಯೋಜನಗಳೆಂದರೆ – ಅವುಗಳ ಕಾರ್ಯಾಚರಣೆಗಳ ದಕ್ಷತೆಯನ್ನು ಹೆಚ್ಚಿಸುವುದು, ಸಾಲಗಳ ತ್ವರಿತ ವಿತರಣೆಯನ್ನು ಖಚಿತಪಡಿಸುವುದು, ವಹಿವಾಟು ವೆಚ್ಚಗಳನ್ನು ಕಡಿಮೆ ಮಾಡುವುದು, ಪಾವತಿಗಳಲ್ಲಿನ ಅಸಮತೋಲನವನ್ನು ಕಡಿಮೆ ಮಾಡುವುದು, DCCB ಗಳು ಮತ್ತು StCB ಗಳೊಂದಿಗೆ ತಡೆರಹಿತ ಲೆಕ್ಕಪತ್ರ ನಿರ್ವಹಣೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸುವುದು. ಕಾಮನ್ ಅಕೌಂಟಿಂಗ್ ಸಿಸ್ಟಮ್ (ಸಿಎಎಸ್) ಮತ್ತು ಮ್ಯಾನೇಜ್ಮೆಂಟ್ ಇನ್ಫರ್ಮೇಷನ್ ಸಿಸ್ಟಮ್ (ಎಂಐಎಸ್) ಅನುಷ್ಠಾನವು ಪಿಎಸಿಎಸ್ ತಮ್ಮ ಕಾರ್ಯಾಚರಣೆಗಳನ್ನು ಆನ್‌ಲೈನ್‌ನಲ್ಲಿ ನಿರ್ವಹಿಸಲು ಮತ್ತು ಡಿಸಿಸಿಬಿಗಳು ಮತ್ತು ಎಸ್‌ಟಿಸಿಬಿಗಳ ಮೂಲಕ ನಬಾರ್ಡ್‌ನಿಂದ ತಮ್ಮ ವಿವಿಧ ಚಟುವಟಿಕೆಗಳಿಗೆ ಮರುಹಣಕಾಸು/ಸಾಲಗಳನ್ನು ಪಡೆಯಲು ಅನುವು ಮಾಡಿಕೊಡುತ್ತದೆ.

ಭಾರತ ಸರ್ಕಾರವು ಸಹಕಾರಿ ಸಂಸ್ಥೆಯ ಉನ್ನತೀಕರಣಕ್ಕೆ ಅನೇಕ

ಯೋಜನೆಗಳನ್ನು ಹಾಕಿಕೊಂಡಿದ್ದರೂ ಇಂದಿಗೂ ಕೆಲವು ಸಹಕಾರಿ ಸಂಸ್ಥೆಗಳು ಕೇವಲ ಒಂದು ಕುರ್ಚಿ ಮತ್ತು ಮೇಜಿಗೆ ಸೀಮಿತವಾಗಿದೆ. .ಅಂತಹ ಕಡೆ ಡಿಜಿಟಲೀಕರಣ ಮರೀಚಿಕೆಯಾಗಿಯೇ ಉಳಿಯುತ್ತದೆ. ಹಾಗೆಯೆ ಉತ್ತಮವಾದ ತಂತ್ರಜ್ಞಾನವನ್ನು ಅಳವಡಿಸಿಕೊಂಡು ರಾಷ್ಟ್ರೀಕೃತ ಬ್ಯಾಂಕುಗಳಿಗೆ ಸಡ್ಡೆ ಹೊಡೆಯುತ್ತಿರುವ ಸಹಕಾರಿಗಳು ನಮ್ಮ ಅಕ್ಷಿಪಟಲದ ಮುಂದಿದೆ. ಉದಾರಣೆಗೆ ಉತ್ತರಕನ್ನಡ ಜಿಲ್ಲೆಯ ಶಿರಸಿ ತಾಲೂಕಿನಲ್ಲಿರುವ ಒಂದು ಸಹಕಾರಿ ಸಂಸ್ಥೆ ಪ್ರಥಮಬಾರಿಗೆ ತನ್ನ ಸದಸ್ಯರಿಗೆ ದೈನಂದಿನ ವ್ಯವಹಾರ ನಡೆಸಲು ಮೊಬೈಲ್ ಆಪ್ (mobile app) ನೀಡಿ ಡಿಜಿಟಲ್ ಕ್ರಾಂತಿಯ ಮೂಲಕ ಸಹಕಾರಿ ಕ್ಷೇತ್ರದ ಇತಿಹಾಸದಲ್ಲೇ ಒಂದು ಮೈಲುಗಲ್ಲನ್ನು ಸಾದಿಸಿ ಜನಮನ್ನಣೆಯನ್ನು ಪಡೆದಿದೆ.

**ಡಿಜಿಟಲೀಕರಣದ ಹಂತಗಳು :**

ಸಾಮಾನ್ಯ ಆಡಳಿತಾತ್ಮಕ ಕಾರ್ಯಾಚರಣೆಗಳನ್ನು ನಿರ್ವಹಿಸಲು ಡಿಜಿಟಲ್ ಉಪಕರಣಗಳನ್ನು ಬಳಸುವುದು ಕೇವಲ ಒಂದು ವಿಷಯವಲ್ಲ; ಸಹಕಾರಿ ಸಂಘಗಳನ್ನು ನಿರ್ವಹಿಸುವ ರೀತಿಯಲ್ಲಿ ಮೂಲಭೂತವಾಗಿ ಏನಾದರೂ ಬದಲಾವಣೆಯಾಗಿದೆ ಎಂಬ ಅರಿವು ಸಹ ಇದೆ. ಹತ್ತರಲ್ಲಿ ಎಂಟಕ್ಕೂ ಹೆಚ್ಚು ಸಹಕಾರಿಗಳಿಗೆ, ತಮ್ಮ ಸರಕುಗಳು ಮತ್ತು ಸೇವೆಗಳನ್ನು ಆನ್‌ಲೈನ್‌ನಲ್ಲಿ ಮಾರಾಟ ಮಾಡಲು ಮತ್ತು ಗ್ರಾಹಕರು ಮತ್ತು ಪೂರೈಕೆದಾರರೊಂದಿಗೆ ಸಂಬಂಧಗಳನ್ನು ನಿರ್ವಹಿಸಲು ಡಿಜಿಟಲ್ ಸಾಧನಗಳನ್ನು ಬಳಸುವುದು ಅತ್ಯಗತ್ಯವಲ್ಲದಿದ್ದರೂ ಮುಖ್ಯವಾಗಿದೆ. ಸ್ವಲ್ಪ ಕಡಿಮೆ-ಪ್ರತಿಕ್ರಿಯಿಸಿದವರಲ್ಲಿ ಕಾಲು ಭಾಗದಷ್ಟು ಜನರು ಅವರನ್ನು "ಸಾಕಷ್ಟು ಮುಖ್ಯ" ಎಂದು ಮಾತ್ರ ಪರಿಗಣಿಸುತ್ತಾರೆ-ಸದಸ್ಯರ ಭಾಗವಹಿಸುವಿಕೆ ಮತ್ತು ಮಧ್ಯಸ್ಥಗಾರರೊಂದಿಗೆ ಸಂವಹನವನ್ನು ಹೆಚ್ಚಿಸಲು ಪರಿಕರಗಳನ್ನು ಬಳಸುವುದರ ಪ್ರಾಮುಖ್ಯತೆಯಾಗಿದೆ.

**ಡಿಜಿಟಲ್ ಯುಗದಲ್ಲಿ ಭಾಗವಹಿಸುವಿಕೆ :**

ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರೊಂದಿಗೆ ವ್ಯವಸ್ಥಿತವಾಗಿ ಮತ್ತು ಶ್ರದ್ಧೆಯಿಂದ ಸಂವಹನ ನಡೆಸಲು ಡಿಜಿಟಲ್ ಸಾಧನಗಳನ್ನು ಬಳಸುತ್ತವೆ . ವೈಯಕ್ತಿಕವಾಗಿ ಸಭೆಗಳಿಗೆ ಹಾಜರಾಗಲು ಸಾಧ್ಯವಾಗದ ಸದಸ್ಯರನ್ನು ತೊಡಗಿಸಿಕೊಳ್ಳುವಲ್ಲಿ ಡಿಜಿಟಲ್ ಉಪಕರಣಗಳು ಸಾಕಷ್ಟು ಸಾಮರ್ಥ್ಯವನ್ನು ಹೊಂದಿವೆ, ತಂತ್ರಜ್ಞಾನಗಳ ಬಳಕೆಯಲ್ಲಿ ಪರಿಚಯವಿಲ್ಲದ ಕೆಲವು ವರ್ಗದ ಸದಸ್ಯರನ್ನು ತೊಡಗಿಸಿಕೊಳ್ಳುವಲ್ಲಿ ಅವರು ಮಿತಿಗಳನ್ನು ತೋರಿಸಿದ್ದಾರೆ. ಇದು ಹಿಂದಿನದಕ್ಕಿಂತ ವಿಭಿನ್ನ ಸಂವಹನ ವಿಧಾನಗಳನ್ನು ರೂಪಿಸಲು ಅಗತ್ಯವಾಗಿಸುತ್ತದೆ.

**ಭವಿಷ್ಯವು ಡಿಜಿಟಲ್ ಭಾಗವಹಿಸುವಿಕೆಯಲ್ಲಿದೆಯೇ?**

ಸಹಕಾರಿ ಸಂಸ್ಥೆಗಳಿಗೆ ಡಿಜಿಟಲೀಕರಣವು ನಿರ್ಣಾಯಕ ಸವಾಲಲ್ಲ ಎಂದು ಇದರ ಅರ್ಥವಲ್ಲ. ಪ್ರಜಾಪ್ರಭುತ್ವದ ಪಾಲ್ಗೊಳ್ಳುವಿಕೆಯ ವಿಷಯದಲ್ಲಿ ಡಿಜಿಟಲೀಕರಣವು ತರಬಹುದಾದ ಪ್ರಯೋಜನಗಳನ್ನು ಸಹಕಾರಿ ಸಂಸ್ಥೆಗಳು ಗ್ರಹಿಸುತ್ತವೆ, ಆದರೆ ಹೆಚ್ಚುತ್ತಿರುವ ಅಂತರ್ಸಂಪರ್ಕ ಮತ್ತು ಸ್ಮಾರ್ಟ್ ಯಾಂತ್ರೀಕೃತಗೊಂಡ ಕಾರಣದಿಂದಾಗಿ ತಂತ್ರಜ್ಞಾನ, ಕೈಗಾರಿಕೆಗಳು ಮತ್ತು ಪ್ರಕ್ರಿಯೆಗಳ ಕ್ಷಿಪ್ರ ಬದಲಾವಣೆಯಿಂದ ಉಂಟಾಗುವ ಸವಾಲುಗಳು ಹೆಚ್ಚು ಸನ್ನಿಹಿತ ಮತ್ತು ವಿಚ್ಛಿದ್ರಕಾರಕವೆಂದು ಅವರು ಗ್ರಹಿಸುತ್ತಾರೆ. ಕೆಲಸದ ಪ್ರಪಂಚ. ಮತ್ತು ಈ ಎರಡು ಆಯಾಮಗಳ ಮೇಲೆ ದೊಡ್ಡ ಸಹಕಾರಿ ಸಂಸ್ಥೆಗಳು ತಮ್ಮ ಗಮನವನ್ನು ಕೇಂದ್ರೀಕರಿಸುತ್ತವೆ, ಸುಸ್ಥಿರ ಬೆಳವಣಿಗೆ ಮತ್ತು ಎಲ್ಲರಿಗೂ ಯೋಗ್ಯವಾದ ಕೆಲಸವನ್ನು ಖಾತ್ರಿಪಡಿಸುವ ಮನಸ್ಸಿನಲ್ಲಿ ಸದಾ ಅಸ್ತಿತ್ವದಲ್ಲಿರುವ ಗುರಿಯೊಂದಿಗೆ.

ಅನುಕೂಲತೆ ಮತ್ತು ಅನಾನುಕೂಲತೆ ಗಳು ಒಂದು ನಾಣ್ಯದ ಎರಡು ಮುಖ ಇದ್ದಂತೆ ಸಹಕಾರಿ ಕ್ಷೇತ್ರದಲ್ಲಿ ಡಿಜಿಟಲೀಕರಣ ಅಳವಡಿಸಿಕೊಂಡರೆ ಆಗುವ ಅನುಕೂಲತೆಗಳು ಈ ಕೆಳಗಿನಂತಿದೆ :

1. ಹೆಚ್ಚಿದ ಡೇಟಾ ಸಂಗ್ರಹಣೆ :
2. ಸುಧಾರಿತ ಸಂಪನ್ಮೂಲ ನಿರ್ವಹಣೆ :
3. ಉತ್ತಮ ಗ್ರಾಹಕ ಅನುಭವ :
4. ಡಿಜಿಟಲ್ ಸಂಸ್ಕೃತಿಯನ್ನು ಸ್ಥಾಪಿಸುವುದು :
5. ಸುಧಾರಿತ ಲಾಭ ದಾಖಲೆಗಳು :
6. ಹೆಚ್ಚು ಚುರುಕುತನ :
7. ಉತ್ತಮ ನಿರ್ಧಾರ ತೆಗೆದುಕೊಳ್ಳುವುದು :
8. ಹೊಸ ಪ್ರತಿಭೆಗಳ ಹುಡುಕಾಟ :

**ಹಾಗೆ ಅನಾನುಕೂಲತೆಗಳು ಇವೆ ಅವುಗಳೆಂದರೆ :**

1. ಅನುಷ್ಠಾನದ ಸವಾಲುಗಳು :
2. ಬದಲಾವಣೆಗೆ ಪ್ರತಿರೋಧ:
3. ಸೈಬರ್ ಸುರಕ್ಷತೆ ಅಪಾಯಗಳು:
4. ಉದ್ಯೋಗ ನಷ್ಟದ ಸಂಭವನೀಯತೆ:
5. ಗ್ರಾಮೀಣ ಜನರು ಡಿಜಿಟಲ್ ಪರಿವರ್ತನೆಯಲ್ಲಿ ಆಸಕ್ತಿ ಹೊಂದಿಲ್ಲ
6. ಅನಕ್ಷರತೆ

ಈ ಮೇಲಿನ ಡಿಜಿಟಲೀಕರಣದ 2 ಮಗ್ಗುಲನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಡಿಜಿಟಲೀಕರಣ ಸಹಕಾರಿ ಸಂಸ್ಥೆಗೆ ಅನಿವಾರ್ಯ ಎನ್ನುವುದರಲ್ಲಿ ಸಂಶಯವಿಲ್ಲ.

**ಉನ್ನತೀಕರಣ :**

ಡಿಜಿಟಲೀಕರಣ ಅಳವಡಿಸುವುದು ಎಷ್ಟು ಮುಖ್ಯವೋ ಅಷ್ಟೇ ಪ್ರಾಮುಖ್ಯತೆಯನ್ನು ನಾವು ಕಾಲಕಾಲಕ್ಕೆ ಅದನ್ನು ಉನ್ನತೀಕರಣ ಗೊಳಿಸಲು ಕೊಡಬೇಕಾಗುತ್ತದೆ . ತಂತ್ರಜ್ಞಾನದ ಉನ್ನತೀಕರಣವು ಜಾಗತಿಕ ಮಾರುಕಟ್ಟೆಯಲ್ಲಿ ತಮ್ಮ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಆಧುನಿಕ ತಂತ್ರಜ್ಞಾನಕ್ಕೆ ಹೊಂದಿಕೊಳ್ಳಲು ಗ್ರಾಹಕರನ್ನು ಪ್ರೋತ್ಸಾಹಿಸುವ ಒಂದು ಉಪಕ್ರಮವಾಗಿದೆ. ಸಹಕಾರಿ ಸಂಸ್ಥೆಗಳು ಹೆಚ್ಚಾಗಿ ಗ್ರಾಮೀಣ ಭಾಗದ ಸದಸ್ಯರನ್ನು ಹೊಂದಿರುವುದರಿಂದ .ಸರಳ ಮತ್ತು ಗ್ರಾಹಕ ಸ್ನೇಹಿ ತಂತ್ರಜ್ಞಾನ ಅಳವಡಿಸುವುದು ಅನಿವಾರ್ಯವಾಗಿದೆ.

**ಸಾರಾಂಶ :**

"ಉಪ್ಪು ತಿಂದವ ನೀರು ಕುಡಿಯಲೇ ಬೇಕು" ಎಂಬ ನಾಣ್ಣುಡಿಯಂತೆ ಇಂದಿನ ಆಧುನಿಕ ಜಗತ್ತಿನಲ್ಲಿ ಪ್ರತಿಯೊಂದು ಕ್ಷೇತ್ರದಲ್ಲೂ ಡಿಜಿಟಲೀಕರಣ ಅನಿವಾರ್ಯವಾಗಿದೆ. ಮತ್ತು ಕಲಿಯುಗದ ಮನುಜರು ಅದನ್ನು ಒಪ್ಪಿ ಮುಂದೆ ಮುಂದೆ ಸಾಗಬೇಕಾಗಿದೆ. ಅದೇ ರೀತಿ ಸಹಕಾರಿ ಕ್ಷೇತ್ರವು ಡಿಜಿಟಲೀಕರಣವಾದರೆ ದೋಷಮುಕ್ತ ಆಡಳಿತದಿಂದ ರಾಷ್ಟ್ರೀಕೃತ ಬ್ಯಾಂಕ್ ಗಳಿಗೆ ಪೈಪೋಟಿ ಕೊಡುವದರ ಜೊತೆಗೆ ದೇಶದ ಆರ್ಥಿಕತೆಗೂ ಸಹಕಾರಿ ಕ್ಷೇತ್ರದಿಂದ ಕೊಡುಗೆಯನ್ನು ನೀಡಬಹುದಾಗಿದೆ.

# ಸಂಯುಕ್ತ ಸಹಕಾರಿಯ ಸಾಧನೆಯ ನೋಟ

– ಶ್ರೀಮತಿ ಸವಿತ ಎನ್. ಇ. ಕ.ರಾಸೌ.ಸಂ.ಸ. ನಿ., ಬೆಂಗಳೂರು

**ಬುದ್ಧಿಮಾತಿದು ನಿನಗೆ : ಸಿದ್ಧನಿರು ಸಕಲಕ್ಕಂ। ಎದ್ದು ಕುಣಿಯಲಿ ಕರ್ಮ: ದೈವ ನಿದ್ರಿಸಲಿ॥ ಅದ್ಭುತರಿದಲ್ಲ: ಭವ್ಯಕ್ಕೆ ಹದ್ದಿಲ್ಲ ಸಿದ್ಧನಾಗೆಲ್ಲಕಂ – ಮಂಕುತಿಮ್ಮ॥ ಎಂಬಂತೆ ಸಮಾಜದ ಏಳಿಗೆಗಾಗಿ ಸಮೃದ್ಧ ಸಮಾಜಕ್ಕಾಗಿ ಸೌಹಾರ್ದ ಸಹಕಾರಿಗಳು ಸಿದ್ಧರಾಗಿವೆ. ಸೌಹಾರ್ದ ಸಹಕಾರಿ ದಿನಾಚರಣೆಯ ಶುಭಾಷಯಗಳು**

ಅಂದಿನ ಗದಗ ತಾಲ್ಲೂಕಿನ ಪೂರ್ವ ದಿಕ್ಕಿಗೆ ರೈಲ್ವೆ ಹಳಿಗೆ ಹೊಂದಿಕೊಂಡಂತಿರುವ ಸುಮಾರು ಐದು ಸಾವಿರ ಮೀರದ ಜನಸಂಖ್ಯೆಯಿಂದ ಕೂಡಿರುವ ಕಣಗಿನಹಾಳ ಗ್ರಾಮದಲ್ಲಿ ಹಿಂದುಳಿದ ಕುರುಬ ಜನಾಂಗದ ಶ್ರೀ ಶಿದ್ದನಗೌಡರು ಹಾಗೂ ಶ್ರೀಮತಿ ನೀಲಮ್ಮ ದಂಪತಿಗಳ ಪುತ್ರನಾಗಿ 25.05.1943 ರಂದು ಜನಿಸಿದ ಶ್ರೀ ಶಿದ್ದನಗೌಡ ಸಣ್ಣರಾಮನಗೌಡ ಪಾಟೀಲರು ಕಣಗಿನಹಾಳ ಗ್ರಾಮದಲ್ಲಿಯೇ ಪ್ರಾಥಮಿಕ ಶಿಕ್ಷಣ ಮುಗಿಸಿದರು. ಮುಂದೆ ಕುಟುಂಬದ ಸಮಸ್ಯೆಯಿಂದಾಗಿ ಹೆಚ್ಚು ಓದಲಾಗದೇ ತಮ್ಮ ಕುಲಕಸುಬಾದ ಕೃಷಿಯನ್ನು ಅವಲಂಬಿಸಿ ನೇಗಿಲಯೋಗಿಯಾದರು. ಅಂದಿನ ಕಾಲದಲ್ಲಿದ್ದ ರೈತರ ಸಮಸ್ಯೆಗಳನ್ನು ಮನಗಂಡು 10 ಮಂದಿ ರೈತರು ಸೇರಿ ಒಂದು ಸಹಕಾರ ಸಂಘವನ್ನು ಕಟ್ಟಿ ತಮ್ಮ ತಮ್ಮಲ್ಲಿಯೇ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ದಾರಿಮಾಡಿಕೊಂಡು ಸಹಕಾರ ಚಳುವಳಿಗೆ ಊರುಗೋಲಾದರು.

ಇಡೀ ಭಾರತ ದೇಶದಲ್ಲಿಯೇ ಸಾರ್ವಜನಿಕರು ಸೇರಿ ಸಹಕಾರ ಸಂಘವನ್ನು ಸ್ಥಾಪಿಸಿ ಸರ್ವರೂ ಸಹಕಾರ ಸಂಘಗಳ ಸದುಪಯೋಗವನ್ನು ಅನುಭವಿಸಬೇಕೆಂದು ತೋರಿಸಿಕೊಟ್ಟರು. ದೇಶಕ್ಕೆ ಸ್ವಾತಂತ್ರ್ಯ ದೊರಕುವ ಮುಂಚೆಯೇ ಸಹಕಾರ ಸಂಘವನ್ನು ಆರಂಭಿಸಿ ದೇಶದ ಇತರೆ ರಾಜ್ಯಗಳಿಗೆ ಮಾದರಿಯಾದರು. ಸಹಕಾರಿ ಕ್ಷೇತ್ರಕ್ಕೆ 123 ವರ್ಷಗಳ ಇತಿಹಾಸವಿದೆ. ಸ್ವಾತಂತ್ರ ಪೂರ್ವದಲ್ಲಿ ದೇಶದ ರೈತರನ್ನು ಸಾಲ ಮುಕ್ತರನ್ನಾಗಿಸುವ ಉದ್ದೇಶದಿಂದ 1904ರಲ್ಲಿ ಸಹಕಾರ ಕಾನೂನು ಮೂಲಕ ಸರಕಾರ ಪ್ರಾರಂಭಿಸಿದ ಈ ಚಳುವಳಿ ಅನೇಕ ಏರು ಪೇರುಗಳನ್ನು ಕಂಡು ಬೃಹದಾಕಾರವಾಗಿ ಬೆಳೆದಿದೆ. ಭಾರತ ವಿಶ್ವದಲ್ಲಿಯೇ ಅತಿ ದೊಡ್ಡ ಸಹಕಾರ ಕ್ಷೇತ್ರವನ್ನು ಹೊಂದಿದ ರಾಷ್ಟ್ರವಾಗಿದೆ. ದೇಶದಲ್ಲಿ 30 ಕೋಟಿಗಿಂತಲೂ ಹೆಚ್ಚು ಜನರು ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. 12.5ಲಕ್ಷಕ್ಕೂ ಹೆಚ್ಚು ವಿವಿಧ ರೀತಿಯ ಸಹಕಾರ ಸಂಸ್ಥೆಗಳಿವೆ. ದೇಶದ ಶೇಕಡಾ 99% ಗ್ರಾಮೀಣ ಪ್ರದೇಶವನ್ನು ಈ ಕ್ಷೇತ್ರ ಆವರಿಸಿದೆ. ದೇಶದಲ್ಲಿ ಆಹಾರ ಉತ್ಪಾದನೆ ಹೆಚ್ಚುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿದೆ. ಹಸಿರು ಕ್ರಾಂತಿಯ ಹರಿಕಾರನೆಂದು ಮತ್ತು ಹಾಲಿನ ಉತ್ಪಾದನೆಯನ್ನು ಹೆಚ್ಚಿಸಿ ಶ್ವೇತ ಕ್ರಾಂತಿಯ ಹರಿಕಾರನೆಂದು ಖ್ಯಾತಿ ಪಡೆದಿದೆ. ಸಹಕಾರ ಈ ದೇಶದ ಜನರ ಜೀವನ ಪದ್ಧತಿಯಾಗಿ ಬೆಳೆದಿದೆ. ಸಹಕಾರ ಕ್ಷೇತ್ರ ಉತ್ತಮ ಆರ್ಥಿಕ ಪದ್ಧತಿಯಾಗಿ ದೇಶದ ಅರ್ಥ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಕಾರ್ಯನಿರ್ವಹಿಸುತ್ತಿದೆ.

ಸರಕಾರ ಸಹಕಾರ ಕ್ಷೇತ್ರವನ್ನು ಪೋಷಿಸುತ್ತ ಬಂದಿದೆ. ಪ್ರತಿ ಯೋಜನೆಗಳಲ್ಲಿ ಸಹಕಾರ ಕ್ಷೇತ್ರದ ಬೆಳವಣಿಗೆಗಾಗಿ ಸಾವಿರಾರು ಕೋಟಿ ರೂ.ಗಳ ವೆಚ್ಚವಾಗುತ್ತಲಿದೆ ಸಹಕಾರ ಕ್ಷೇತ್ರ ಇಷ್ಟೆಲ್ಲ ಸಾಧನೆಗಳನ್ನು ಮಾಡಿದೆಯಾದರೂ ಸಹ ದೇಶದ ಆರ್ಥಿಕ ತಜ್ಞರು ಸಹಕಾರ ಕ್ಷೇತ್ರದ ಸಾಧನೆ ನಿರೀಕ್ಷಿಸದ ಮಟ್ಟದಲ್ಲಿ ಆಗಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಅರ್ಧನಾರೀಶ್ವರನ ಸಮಿತಿಯನ್ನು ನೇಮಿಸಿತು. ಈ ವರದಿಯ ಪ್ರಮುಖ ಅಂಶಗಳಲ್ಲೊಂದಾದದ್ದು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿಗಳಿಗೆ ವ್ಯವಹಾರಿಕ ಸ್ವಾತಂತ್ರ ಆರ್ಥಿಕ ಸ್ವಾಯತ್ತತೆ ಅಗತ್ಯವಾಗಿದೆ. ಸರಕಾರದ ಪಾಲುಗಾರಿಕೆ ಇರಬೇಕು ಆದರೆ ಹತೋಟಿಯಲ್ಲ. ಸರಕಾರದ ಅತೀವವಾದ ಹತೋಟಿಯಿಂದ ಸಹಕಾರ ಕ್ಷೇತ್ರ ನಿರೀಕ್ಷಿಸಿದ ಮಟ್ಟದಲ್ಲಿ ಸಾಧನೆ ಮಾಡಲಾಗುತ್ತಿಲ್ಲ ಎಂಬುದಾಗಿರುವುದನ್ನು ಸರಕಾರ ಗಮನಿಸಿ ಕೇಂದ್ರದ ಯೋಜನಾ ಆಯೋಗದವರು ಸರಕಾರದ ಕನಿಷ್ಠ ಪಾತ್ರವಿರುವ ಮಾದರಿ ಕಾಯ್ದೆಯನ್ನು ರೂಪಿಸಿ ದೇಶದ ಎಲ್ಲ ರಾಜ್ಯಗಳಿಗೆ ಕಳುಹಿಸಲಾಯಿತು. ಇದಕ್ಕೆ ಸ್ವಾಯತ್ತ ಕಾಯ್ದೆ (ಲಿಬರಲ್ ಕಾಯ್ದೆ) ಎಂದೂ ಹೆಸರಿಸಲಾಯಿತು. ಈ ಕಾಯ್ದೆಯ ಅನುಷ್ಠಾನವೇ ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ಉಗಮ 1997. ಕರ್ನಾಟಕದಲ್ಲಿ 2001 ರಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜನವರಿ 1 ರಂದು ಜಾರಿಗೆ ಬಂದಿದೆ. ಅದರ ಜ್ಞಾಪಕಾರ್ಥವಾಗಿ ಜನವರಿ 1 ರಂದು ಸೌಹಾರ್ದ ಸಹಕಾರಿ ದಿನವನ್ನಾಗಿ ಆಚರಿಸಲಾಗುತ್ತದೆ. ರಾಜ್ಯಾದ್ಯಂತ ಎಲ್ಲ ಸೌಹಾರ್ದ ಸಹಕಾರಿಗಳು ಈ ದಿನವನ್ನು ಆಚರಿಸುವುದರ ಮೂಲಕ ಸೌಹಾರ್ದ ಸಹಕಾರಿಗಳು ಸಮಾಜದಲ್ಲಿ ತಮ್ಮನ್ನು ಗುರುತಿಸಿಕೊಳ್ಳುವಂತಾಗಬೇಕು ನಮ್ಮ ಅಸ್ತಿತ್ವದ ಬಗ್ಗೆ ಸಮಾಜದಲ್ಲಿ ಅರಿವು ಮೂಡಬೇಕು. ಸೌಹಾರ್ದ ಸಹಕಾರಿಗಳು ಉತ್ತಮ ಆರ್ಥಿಕ ಸಂಘಟನೆಗಳು ಎಂದು ಗುರುತಿಸಬೇಕು.

ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದಾಗಿನಿಂದ ಇದುವರೆಗೆ 6084ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ಇದರಲ್ಲಿ ಕೆಲವು 1959ರ ಕಾಯ್ದೆಯಿಂದ ಪರಿವರ್ತನೆಯಾಗಿವೆ. ಈ ಕ್ಷೇತ್ರದಲ್ಲಿ ಸರಕಾರದ ಪಾತ್ರ ಬಹಳ ಕಡಿಮೆ. ಸಹಕಾರಿಗಳ ನೋಂದಣೆ ಉಪನಿಬಂಧನೆಗಳ ತಿದ್ದುಪಡಿ, ಅವಶ್ಯಕವೆನಿಸಿದಲ್ಲಿ ವಿಚಾರಣೆ, ವ್ಯಾಜ್ಯಗಳ ವಿಚಾರಣೆ ಮತ್ತು ಸಮಾಪನೆಗೆ ಮಾತ್ರ ಸಿಮೀತವಾಗಿದೆ. ಉಳಿದೆಲ್ಲ ವ್ಯವಸ್ಥೆಯನ್ನು ನೋಡಿಕೊಳ್ಳಲು ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ರಚಿತವಾಗಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ವಹಿಸಲಾಗಿದೆ.

ಈ ಸಂಸ್ಥೆ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಶಾಸನ ಬದ್ಧ ಮಾರ್ಗದರ್ಶನಗಳ ಜೊತೆಗೆ ಅಭಿವೃದ್ಧಿಗೆ ಅವಶ್ಯಕವಿರುವ ಶಿಕ್ಷಣ ತರಬೇತಿ ಪ್ರಚಾರ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಜರುಗಿಸುತ್ತಿರುವುದು ಶ್ಲಾಘನೀಯ. ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗಾಗಿ ಸ್ವಾಯತ್ತತೆ, ಸ್ವಯಂ ಆಡಳಿತ, ಹಾಗೂ ಸ್ವಯಂ ನಿಯಂತ್ರಣ ಎಂಬ ಉತ್ತಮ ಧ್ಯೇಯವನ್ನು ಹೊಂದಿದೆ. ಹಾಗೂ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 26
Licensed to post without Prepayment License No. PMG BG/WPP-384/2023-2025.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಇದರ ದೃಷ್ಟಿ, ಧ್ಯೇಯ ಹಾಗೂ ಮೌಲ್ಯಗಳು. –ಧ್ಯೇಯ : ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣದ ಜೊತೆಗೆ ವೃತ್ತಿಪರ, ಪಾರದರ್ಶಕ ಹಾಗೂ ಉತ್ತರದಾಯಿತ್ವದ ಸೌಹಾರ್ದ ಸಹಕಾರಿ ವ್ಯವಸ್ಥೆಯ ನಿರ್ಮಾಣ. ದೃಷ್ಟಿ–ಸ್ವಾಯತ್ತ, ಸಾಮಾಜಿಕ ಬದ್ಧತೆ, ಸಕಾರಾತ್ಮಕ ಚಿಂತನೆ, ಅಭಿವೃದ್ಧಿಪರ ವಿಶ್ವಮಾದರಿ ಸಹಕಾರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು. ಮೌಲ್ಯಗಳು.– ಜ್ಞಾನ, ಸೇವೆ, ಬದ್ಧತೆ, ಭಾಗವಹಿಸುವಿಕೆ, ಉತ್ತರದಾಯಿತ್ವ.

ಇತ್ತೀಚಿನ ವರ್ಷಗಳಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯಡಿ ಪ್ರತಿ ವರ್ಷ 350 ರಿಂದ 400 ರ ವರೆಗೆ ಹೊಸ ಸೌಹಾರ್ದ ಸಹಕಾರಿಗಳು ನೊಂದಣಿಯಾಗುತ್ತಿವೆ. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ವಿಶೇಷವೆಂದರೆ ಯುವಕರು ಹಾಗೂ ಮಹಿಳೆಯರು ಈ ಕ್ಷೇತ್ರದಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿರುವುದು. "ಯುವ ಪೀಳಿಗೆಯ ಹೊಸ ಸಹಕಾರಿ ಸಂಸ್ಥೆಗಳು" ಎಂದು ಈ ಕ್ಷೇತ್ರವನ್ನು ಗುರುತಿಸಲಾಗುತ್ತಿದೆ.

**ಅವಲೋಕನೆಯ ಪರ್ವಕಾಲ**

ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ, ತಾಲ್ಲೂಕು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಈ ಸೌಹಾರ್ದ ಸಹಕಾರಿಗಳು ಪ್ರಾರಂಭವಾಗಿವೆ. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ನಮ್ಮ ಇದುವರೆಗಿನ ಕಾರ್ಯಚಟುವಟಿಕೆಗಳ ಹಾಗೂ ಮುಂಬರುವ ದಿನಗಳಲ್ಲಿ ಸಹಕಾರ ಕ್ಷೇತ್ರದ ಕಾರ್ಯವಿಧಾನದ ವೈಖರಿ ಮುಂತಾದ ವಿಷಯಗಳ ಬಗ್ಗೆ ಸಹಕಾರಿಗಳು ಅವಲೋಕನೆ ಮಾಡಬೇಕಾದ ಪರ್ವಕಾಲ ಇದಾಗಿದೆ. 2012ರಲ್ಲಿ ದೇಶದ 97ನೇ ಸಂವಿಧಾನದ ತಿದ್ದುಪಡಿ ಜಾರಿಯಾಗಿದೆ. ಸಹಕಾರ ಕ್ಷೇತ್ರಕ್ಕೆ ಮಾನ್ಯತೆ ನೀಡಲಾಗಿದೆ. ಸಹಕಾರಿಗಳಿಗೆ ಆಡಳಿತ ಹಾಗೂ ವ್ಯವಹಾರಿಕ ಸ್ವಾತಂತ್ರವನ್ನು ನೀಡುವುದರ ಜೊತೆಗೆ ಹೆಚ್ಚಿನ ಜವಾಬ್ದಾರಿಯನ್ನು ನೀಡಿರುವುದು ಸಹಕಾರಿಗಳಿಗೆ ಸಂತೋಷವನ್ನುಂಟು ಮಾಡಿದೆ ಹಾಗೂ ಸಹಕಾರಿ ಕರ್ತವ್ಯ ಪ್ರಜ್ಞೆಯನ್ನು ಹೆಚ್ಚಿಸಿದೆ.

ರಾಜ್ಯದಲ್ಲಿರುವ ದಿನಾಂಕ 31.03.2023 ಕ್ಕೆ 5918 ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ಸಹಕಾರಿಗಳು ಹೆಮ್ಮೆಪಡುವ ರೀತಿಯಲ್ಲಿ ಈ ಕ್ಷೇತ್ರದ ಸಾಧನೆಯಿದೆ ಶೇರು ಬಂಡವಾಳ– 1401 ಕೋಟಿ, ಠೇವಣಿ– 38,004 ಕೋಟಿ, ನೀಡಿದ ಸಾಲಗಳು– 29,591 ಕೋಟಿ, ಕಾಯ್ದಿಟ್ಟ ನಿಧಿಗಳು_ 3208 ಕೋಟಿ, ದುಡಿಯುವ ಬಂಡವಾಳ– 42,954 ಕೋಟಿ, ಲಾಭ–544 ಕೋಟಿ, ನೇರವಾಗಿ ಉದ್ಯೋಗದಲ್ಲಿರುವವರು 60,000 ಜನ, ಇ–ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ. 1622. ರಾಜ್ಯದ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯ ಸರಕಾರವು ಇ–ಸ್ಟಾಂಪಿಂಗ್ ವ್ಯವಹಾರ ಮಾಡುವ (ಛಾಪಾಕಾಗದ ಮಾರಾಟ) ವ್ಯವಸ್ಥೆಯನ್ನು ಸೌಹಾರ್ದ ಸಹಕಾರಿಗಳಿಗೆ ವಹಿಸಿಕೊಟ್ಟಿದ್ದಾರೆ. ರಾಷ್ಟ್ರದಲ್ಲಿ ಸಹಕಾರಿ ಕ್ಷೇತ್ರದ ಮೂಲಕ ಪ್ರಪ್ರಥಮವಾಗಿ ಇ–ಸ್ಟಾಂಪಿಂಗ್ ವ್ಯವಹಾರ ಮಾಡುವ ಹೆಗ್ಗಳಿಕೆ ಸೌಹಾರ್ದ ಸಹಕಾರಿ ಕ್ಷೇತ್ರದ್ದಾಗಿದೆ.

ಸೌಹಾರ್ದ ಸಂಯುಕ್ತ ಸಹಕಾರಿ ಕ್ಷೇತ್ರದ ಈ 22 ವರ್ಷಗಳ ಸಾಧನೆಗಳ ಹೆಜ್ಜೆ ಗುರುತು

ದೇಶದಲ್ಲಿ ಸ್ವಾಯತ್ತ ಕಾಯ್ದೆಗಳ ಅಡಿಯಲ್ಲಿ ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯು ದಿನಾಂಕ 01.01.2001ರಂದು ರಚನೆಯಾಗಿದ್ದು, ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ವೈಶಿಷ್ಟತೆ ಇಡೀ ದೇಶದಲ್ಲಿಯೇ ಭಿನ್ನವಾಗಿದ್ದು, ಸದಸ್ಯ ಸಹಕಾರಿಗಳಿಂದ ಆಯ್ಕೆಗೊಂಡ ಆಡಳಿತ ಮಂಡಳಿ ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿಗಳ ಶಾಸನಬದ್ಧ ಆಡಳಿತದ ನೇತೃತ್ವವಹಿಸಿರುವುದು ಇಡೀ ದೇಶದಲ್ಲಿ ಮಾದರಿ.

ಸೌಹಾರ್ದ ಸಹಕಾರಿ ಕ್ಷೇತ್ರವನ್ನು "ಯುವಪೀಳಿಗೆಯ" ನವ ಸಹಕಾರಿಗಳು ಎಂದು ಕರೆಯುತ್ತಾರೆ. ಏಕೆಂದರೆ ಯುವ ಜನಾಂಗ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಂಡು ರಾಜ್ಯದಾದ್ಯಂತ ನೂರಾರುಕ್ಕಿಂತಲೂ ಹೆಚ್ಚು ಸೌಹಾರ್ದ ಸಹಕಾರಿಗಳು ಹುಟ್ಟಿಹಾಕಿದ್ದಾರೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಸಾರಥ್ಯವನ್ನು ವಹಿಸಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಅವಶ್ಯಕವೆನಿಸುವ ಎಲ್ಲ ಕಾನೂನು ಬದ್ಧ ಹಾಗೂ ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲಿದೆ. ಶಿಕ್ಷಣ, ತರಬೇತಿ, ಪ್ರಚಾರ ಹಾಗೂ ನಿಯಂತ್ರಣ ಚಟುವಟಿಕೆಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಅಭಿವೃದ್ಧಿದಾಯಕ ಮುನ್ನಡೆಯುತ್ತಿರುವುದು ತಮಗೆಲ್ಲ ತಿಳಿದಿದೆ. ರಾಜ್ಯದಲ್ಲಿ ಈವರೆಗೆ 5900ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ನೊಂದಣಿಯಾಗಿವೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 70 ಲಕ್ಷಕ್ಕೂ ಹೆಚ್ಚು ಸದಸ್ಯರು ತೊಡಗಿಸಿಕೊಂಡಿದ್ದಾರೆ. ನೇರವಾಗಿ 68,000ಕ್ಕೂ ಹೆಚ್ಚು ಜನರಿಗೆ ಉದ್ಯೋಗವನ್ನು ಕಲ್ಪಿಸಲಾಗಿದೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ 329 ಮಹಿಳಾ ಸೌಹಾರ್ದ ಸಹಕಾರಿಗಳು ನೊಂದಣಿಯಾಗಿವೆ.

ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು.

**ಕೇಂದ್ರ ಕಛೇರಿ :** "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291

**ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34

**ಇ–ಸ್ಟಾಂಪಿಂಗ್ ವಿಭಾಗ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055

**ಬೆಂಗಳೂರು ಪ್ರಾಂತೀಯ ಕಛೇರಿ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.

**ಮೈಸೂರು ಪ್ರಾಂತೀಯ ಕಛೇರಿ :** ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299

**ಬೆಳಗಾವಿ ಪ್ರಾಂತೀಯ ಕಛೇರಿ :** #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.

**ಕಲಬುರಗಿ ಪ್ರಾಂತೀಯ ಕಛೇರಿ :** # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003